# ೨೧ನೇ ಶತಮಾನದ ಕನ್ನಡ ಕಾವ್ಯ ಒಂದು ಪಕ್ಷಿನೋಟ

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ - ಕನ್ನಡಿಗ - ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ತ್ವದ ಪರಮವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ : ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿ ರೂಪುಗೊಂಡಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ. ಈ ವಿದ್ವತ್ ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆಯನ್ನು ಶೋಧಿಸಲಿಕ್ಕೆ ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾ ಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ

ಬಂದಿದೆ. ಅಂದರೆ: ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. ೨೧ನೇ ಶತಮಾನದ ಕನ್ನಡ ಕಾವ್ಯ ಒಂದು ಪಕ್ಷಿನೋಟ ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಆರ್. ಸುಧೀಂದ್ರಕುಮಾರ್ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

**ಡಾ. ಎ. ಮುರಿಗೆಪ್ಪ**
ಕುಲಪತಿ

(೧)

ಹಿಂತಿರುಗಿ ನೋಡಿದಾಗ ೨೦ನೇ ಶತಮಾನದ ಹೊಸಗನ್ನಡ ಸಾಹಿತ್ಯವು ನವೋದಯ, ಪ್ರಗತಿಶೀಲ, ನವ್ಯ, ದಲಿತ - ಬಂಡಾಯದ ಕವಲುಗಳಲ್ಲಿ ಪುತಿನ, ಗೋಪಾಲಕೃಷ್ಣ ಅಡಿಗ, ಚಂದ್ರಶೇಖರ ಕಂಬಾರ, ಎಚ್, ಎಸ್. ಶಿವಪ್ರಕಾಶ್, ಪ್ರತಿಭಾ ನಂದಕುಮಾರ್, ಸವಿತಾ ನಾಗಭೂಷಣ, ಸಿದ್ಧಲಿಂಗಯ್ಯ, ಎಸ್. ಮಂಜುನಾಥ್, ಕೆ.ಬಿ. ಸಿದ್ಧಯ್ಯ ಈ ಕವಿಗಳು ಕಳೆದ ಶತಮಾನದ ಕನ್ನಡ ಕಾವ್ಯಕ್ಕೆ ಹೊಸ ತೇಜಸ್ಸನ್ನು ತಂದುಕೊಟ್ಟಿದ್ದಾರೆ.

ಹೊಸ ಶತಮಾನದ ಆರಂಭದ ಈ ದಶಕದಲ್ಲಿ ನಿರ್ದಿಷ್ಟವಾದ ಚಳುವಳಿಯಾಗಲಿ, ಸಿದ್ಧಾಂತ ಪ್ರಣೀತವಾದ ಕಾವ್ಯ ಮಾರ್ಗವಾಗಲಿ ಕಂಡುಬರುತ್ತಿಲ್ಲ. ಈಗಿರುವ ಸನ್ನಿವೇಶವು ಖಾಲಿಭಿತ್ತಿಯಾಗಿ ತೆರೆದ ವಾತಾವರಣವೊಂದನ್ನು ಕಲ್ಪಿಸಿದೆ ಅನ್ನಿಸಿದರೂ ಕವಿಯ ಹೊಣೆಗಾರಿಕೆಯನ್ನು ಹೆಚ್ಚಿಸಿದೆ. ಏನಿಲ್ಲವೆಂದರೂ ಒಂದು ವರ್ಷಕ್ಕೆ ಐವತ್ತರಿಂದ ಎಪ್ಪತ್ತರ ಸಂಖ್ಯೆವರೆಗೂ ಮುದ್ದಾಗಿ ಪ್ರಕಟವಾಗುತ್ತಿರುವ ಕವನ ಸಂಕಲನಗಳನ್ನು ಪರಿಶೀಲಿಸಿದರೆ ಇವುಗಳಲ್ಲಿ ತೊಡಗಿರುವವರ ಸಂಖ್ಯೆ ತೀರಾ ಕಡಿಮೆ ಇದೆ. ಅಂತಹ ಕೆಲವು ಪ್ರಾತಿನಿಧಿಕ ಕವಿಗಳ ಕವಿತೆಗಳನ್ನು ಆಧರಿಸಿರುವ ಈ ಅಧ್ಯಯನ ಒಂದು ಪಕ್ಷಿನೋಟ ಮಾತ್ರವೇ ಆಗಿದೆ. ಹೊಸ ಶತಮಾನದ (೨೦೦೧ ರಿಂದ ಈಚೆಗೆ) ಕನ್ನಡ ಕಾವ್ಯದ ಹರಿವನ್ನು ಅಭಿವ್ಯಕ್ತಿ ಹಾಗೂ ಅನ್ವೇಷಣೆಯ ಹಿನ್ನೆಲೆಯಲ್ಲಿ ಸ್ಥೂಲವಾಗಿ ಮೂರು ವಿಧದಲ್ಲಿ ಕಂಡುಕೊಳ್ಳಬಹುದಾಗಿದೆ.

೧. ಸಮುದಾಯಸ್ಮೃತಿ ಸಂಬಂಧಿತ ಕಾವ್ಯ
೨. ಆಧುನಿಕ ಜೀವಲಯದ ನಿರೂಪವಾಗಿ ಕಾವ್ಯ
೩. ಸ್ತ್ರೀ ಸಂವೇದನೆಯ ಆಯಾಮವಾಗಿ ಕಾವ್ಯ

**೧. ಸಮುದಾಯಸ್ಮೃತಿ ಸಂಬಂಧಿತ ಕಾವ್ಯ**

೧೯೭೦ - ೮೦ರ ದಶಕದಲ್ಲಿ ಮೊದಲಬಾರಿಗೆ ಶಿಕ್ಷಣ ಪಡೆದ ದಮನಿತ ಸಮುದಾಯಗಳು ಕಾವ್ಯದಲ್ಲಿ ತೊಡಗಿಕೊಂಡಿದ್ದರ ಮುಂದುವರೆದ ಭಾಗವಾಗಿ ಈ ಕಾಲದ ಹಲವು ಸಮುದಾಯಗಳು ಕಾವ್ಯದಲ್ಲಿ ಭಾಗವಹಿಸುತ್ತಿವೆ. ಇದಕ್ಕಿರುವ ಬಲವಾದ ಕಾರಣವೊಂದನ್ನು ಚಿಂತಕರಾದ ಡಾ. ಬಂಜಗೆರೆ ಜಯಪ್ರಕಾಶ್ ಹೀಗೆ ಗುರುತಿಸುತ್ತಾರೆ.

*'೭೦–*

*೯೦ರ ದಶಕದಲ್ಲಿ ಬಂಡಾಯ ಸಾಹಿತ್ಯ ಮತ್ತು ಇತರೆ ಪ್ರಗತಿಪರ, ಜನಪರ ಚಳುವಳಿಗಳು ಸೃಷ್ಟಿಸಿದ ವಾತಾವರಣದಿಂದಾಗಿ ನಮ್ಮ ಅನುಭವಗಳು ತಮ್ಮ ತನವನ್ನು ಆವಿಷ್ಕರಿಸಿಕೊಳ್ಳುವ ಬಾಯಿ ಪಡೆದುಕೊಳ್ಳುತ್ತಿವೆ. ಬಂಡಾಯ ಕಾವ್ಯ ಈಗ ಪ್ರಧಾನ ಅಭಿವ್ಯಕ್ತಿ ಮಾರ್ಗವಾಗಿ ಉಳಿದು ಕೊಂಡಿಲ್ಲದಿರಬಹುದು ಆದರೆ ಅದು ಸೃಷ್ಟಿಸಿದ ಒತ್ತಾಸೆ, ಈ ನೆಲದ ಬೇರುಗಳ ಬುಡಗಳವರೆಗೆ ತಲುಪಿದೆ ಅದು ದನಿಯಾಗಿ ಹೊಮ್ಮತೊಡಗಿದೆ* **– (ನೇಕಾರ ಕವನ ಸಂಕಲನದ ಮುನ್ನುಡಿ)**

ಹೀಗೆ ದನಿಯಾಗಿ ಹೊಮ್ಮಿರುವ ಕವಿ ಕೆ.ಪಿ. ಮೃತ್ಯುಂಜಯ. 'ಒಂದು ಅನುರಾಗಕ್ಕಾಗಿ ಎಷ್ಟೆಲ್ಲ' (೧೯೯೫), 'ಮರ್ತ್ಯ ಮೀರದ ಮಾತು' (೨೦೦೦), 'ಎಲೆ ಎಸೆದ ಮರ' (೨೦೦೨), 'ಅವರವರ ಸಾವು' (೨೦೦೪) ಇವರ ಕವನ ಸಂಕಲನಗಳು.

*ಬಿದ್ದೋಗ್ತೀಯ*
*ನೆಟ್ಟಗೆ ನಿಂತ್ಕೊ ಮೊದ್ಲು*
*ಇಲ್ಲಾಂದ್ರೆ ಡೊಂಕು ಬಿಲ್ಲಾಗ್ತೀಯ*
*ಸೆಟೆದು ನಿಲ್ಲಬೇಕು*
*ಹಿಂಗೇಳು?*
*ಸೆಟೆದು! (ಅಯ್ಯ ಹೇಳ್ತಾ ಇದ್ದುದ್ದು)*

ಅಯ್ಯನ ಜೀವನಾನುಭವದ ಕಾದಕುಲುಮೆಯಿಂದ ಹುಟ್ಟಿರುವ ಸ್ವಾಭಿಮಾನದ ಈ ತಿಳುವಳಿಕೆಗೂ ಕವಿಯಾದ ಮಗ ಅನುಭವಿಸುತ್ತಿರುವ ಸಂಕಟಕ್ಕೂ ಇಲ್ಲಿ ಸಂಬಂಧವಿದೆ :

*ರಂಗನಾಥಸ್ವಾಮಿಗೆ ಬಂಗಾರದ ಕಿರೀಟಬೇಕು*
*ಛತ್ರಿ ಬೇಕು*
*ಇವ ಮಾತ್ರ ಬ್ಯಾಡ*
*ಇವನು ಸತ್ತಾಗ*
*"ಬಿರ್ನೆ ಊರೆಚೆ ತಗೊಂಡು ಹೋಗಿ*
*ಒಪ್ಪ ಮಾಡ್ರಿ!" ಅಂತ ಗದರ್ತಾರೆ*
*ಯಪ್ಪಾ ಬೇಡಿಕೊಂಡರೂ ಸಿಗದು ಸಿದಿಗಿ*
*ಬೊಂಬು ಇವನ ಶವಾನ ನೋಡೋಕೂ ಬರದೆ*
*ಸೂಳೆಮನೆ ಜಗಲಿ ಮೇಲೆ ಮೂಗುಬೊಟ್ಟು*
*ಹಿಡಿದು ಕೂರ್ತಾನೆ ಹಾರವ; ಇವನಿಗೊಂದು*
*ಹಿಡಿ ಮಣ್ಣಾಕೋಕೂ ನೇಗಿಲು*
*ಹೊತ್ಕೊಂಡು ಹೊರಡ್ತಾನೆ ಒಕ್ಕಲು ಮಗ || (ಜಕ್ಕಣರು)*

ವರ್ಣ ಸಂಘರ್ಷದಲ್ಲಿ ಸಿಲುಕಿದ ಸಮುದಾಯದ ನೋವಿದು. ಮೃತ್ಯುಂಜಯರ ಕವಿತೆಗಳಲ್ಲಿ ಸಾವಿನ ನೆರಳು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತದೆ:

*ಎಲೆ ಹೆಗಲ ಮೇಲೆ ಬೀಳುತ್ತೆ*
*ಹಗಲು ತೊಡೆ ಮೇಲೆ ಒರಗುತ್ತೆ*

*ತೊಡೆ ಕುಸಿದು ಹೆಜ್ಜೆ ಮೇಲೆ*
*ಹೆಜ್ಜೆಯೆಂಬುದು ಹಿಸಿದು ನೆಲವನ್ನೆ!*

ಹುಚ್ಚು - ಯೌವನ - ಮುಪ್ಪಿನ ಅವಸ್ಥೆಯನ್ನು ತೀವ್ರವಾಗಿ ಅಷ್ಟೇ ಸಾಂದ್ರವಾಗಿ ಹೀಗೆ ಹಿಡಿದುಕೊಡುತ್ತಾರೆ:

*ಎಲೆ ಎಸೆದ ಮರ*
*ಕಣ್ಣೊಳಗೆ*
*ಮುಚ್ಚಿದರೆ ಕತ್ತಲು*
*ಬಿಟ್ಟರೆ ನೆರಳ* || (ಎಲೆ ಎಸೆದ ಮರ)

ಎನ್ನುತ ನಮ್ಮೊಳಗೇ ಬೆಳೆಯುತ್ತಾ ಬರುವ ಸಾವು ತರುವ ಸೋಜಿಗವನ್ನು ಕಾಣಿಸುತ್ತಾರೆ. ನಾಲ್ಕು ದಿನದ ಆಟದಂತಿರುವ ಜೀವನಕ್ಕೆ ಈ ಜೀವಕ್ಕೆ ಕವಿ ಮಂಜೂರು ಮಾಡುವುದು:

*ಏನು ಮಾರಿ ಏನು ಕೊಳ್ಳುವಿರಿ*
*ಸಂತೆಯಲ್ಲಿ; ಮರೆಯದೆ ಸೇರು ಪುರಿ*
*ಹೂ ಸಿಕ್ಕರೆ ಕೊಳ್ಳಿರಿ*
*ಮಾರು ಮಾರು ಮಾರು* || (ಎಲ್ಲರೂ ಹೊರಟಾಯಿತು)

ಇದನ್ನು ಓದುವಾಗ ಸಾವನ್ನು ಕಾವ್ಯದ ಹುಡುಕಾಟದ ಹಾದಿಯಾಗಿ ಕಂಡುಕೊಂಡಿರುವ ಮತ್ತೊಬ್ಬ ಕವಿ ಗಂಗಾಧರ ಚಿತ್ತಾಲರ ಕವಿತೆಗಳು ನೆನಪಿಗೆ ಬರುತ್ತದೆ. ಗಾಢವಾಗಿ ಆವರಿಸಿಕೊಂಡಿರುವ ಈ ಸಾವಿನ ಭಯವನ್ನು ತೊರೆಯಲು ಕವಿ ಪ್ರೀತಿಯತ್ತ ಕೈ ಚಾಚುತ್ತಾರೆ:

*ಕಾದು ಕಾಯಲಾಗದೆ ಕಾದು ಕುದಿದು ಕುದಿಯಲಾಗದೆ ಕುದಿದು*
*ಬಾಗಿ ಬೆಂಬಲ ಮಾಗಿ ಮಮ್ಮಲ ಇಳಿಬಿದ್ದು*
*ಇಳೆಗೆ ಸಾವರಿಸಿ ಮತ್ತೆದ್ದು ಮೇಲೆ ಅಂತರಿಕ್ಷದ ಪಕ್ಷಿಯಾಗಿ*
*ಸುಳಿ ಸುಳಿ ಸುತ್ತಿ ಮತ್ತೆ ಬೇರಾಗಿ*
*ಒಂದು ಅನುರಾಗಕ್ಕಾಗಿ...* (ಒಂದು ಅನುರಾಗಕ್ಕಾಗಿ ಎಷ್ಟೆಲ್ಲ)

ಕಟ್ಟಕಡೆಗೂ ಈ ಜೀವ ಹಂಬಲಿಸುವುದು ಪ್ರೀತಿಯನ್ನು ಮಾತ್ರವೇ. ಅದನ್ನು ಪಡೆಯಲೆಂದೇ ಇಲ್ಲಿ ಹೋರಾಟವಿದೆ ಅವಿಶ್ರಾಂತವಾಗಿ ಎಲ್ಲರೂ ಹೋರಾಡುತ್ತಿದ್ದಾರೆ. ಪ್ರೀತಿಯ ಜೊತೆಗೆ ನಿಸರ್ಗವು ಮನುಷ್ಯನಿಗೆ ಜೀವಪೋಷಕವಾಗಿ ಒದಗಿಬರುವುದು ಹೀಗೆ:

*ಈ ಕಣ್ಣಿಗೆ ಹೂ*
*ತೋರಿಸಿದ ಬೆಳಕಿಗೆ*
*ಈ ಮನಸಿನ ನೋವು*
*ಮರೆಸಿದ ಗಾಳಿಗೆ*
*ಈ ಹೃದಯದ ಬೆಂಕಿ*
*ಆರಿಸಿದ ನೀರಿಗೆ*
*ಕೈ ಮುಗಿಯದೆ (ನಮನ)*

ಕವಿ ಸುಬ್ಬು ಹೊಲೆಯಾರ್ ದಲಿತ ಲೋಕದ ಸಂಕಟವನ್ನು ಕಾವ್ಯದಲ್ಲಿ ತೋರುವ ಪ್ರಯತ್ನದಲ್ಲಿರುವರು. ಮುಖ್ಯವಾಗಿ ಕಾವ್ಯದ ನುಡುಗಟ್ಟಿನ ವಿಷಯದಲ್ಲಿ ೭೦ರ ದಶಕದ ದಲಿತ ಕಾವ್ಯಕ್ಕಿಂತ ಭಿನ್ನವಾದ ತಿರುವನ್ನು ಸುಬ್ಬುರವರ ಕಾವ್ಯ ಪಡೆಯುತ್ತಿದೆ. 'ಸೂಜಿ ಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು' (೨೦೦೩) ಇವರ ಕವನ ಸಂಕಲನ.

*ಬಚ್ಚಿಟ್ಟುಕೊಳ್ಳಲಿ ಎಲ್ಲಿ*
*ಅವಮಾನದ ಕಲ್ಲು ಸಕ್ಕರೆಯನ್ನ* (ಮೌನ ಬಿಟ್ಟು ಹೋಗುವುದೆಲ್ಲಿಗೆ)

ಈ ಅವಮಾನಕ್ಕೆ ಪುರಾವೆಯೊಂದನ್ನು ನೀಡುತ್ತಲಿದೆ ಮುಂದಿನ ಕವಿತೆ:

*ನೀರೇ ನೆಲಕ್ಕೆ ಮೈಲಿಗೆಯಾಗಿರಲು*
*ಪಾಮರ ನಾನು ಪಾದ ಎಲ್ಲಿಡಲಿ ಮೇಲಿನವರೆ?*
(ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು)

ಶೋಷಿಸಿದ ಮೇಲ್ವರ್ಗದ ಕುರಿತು ಹೀಗೆ ಹೇಳುವಾಗಲೂ ಓದುಗರ ಅರಿವಿಗೆ ತರುವುದು:

*ಊರಿಗೊಂದು ಹೊಲಗೇರಿ*
*ಎಲ್ಲರೆದೆಯಲ್ಲಿ ನೂರೆಂಟು ಹೊಲಗೇರಿ*
(ಉಸಿರುಸುಟ್ಟ ಇತಿಹಾಸ ಹೆಗಲ ಮೇಲೆ)

ಹೀಗೆ ಕನ್ನಡಿಯಂತೆ ನುಡಿದರೂ ದಮನಿತರ ಮೇಲಿನ ದೌರ್ಜನ್ಯ, ಕೊಲೆ ನಿಲ್ಲದ ಈ ಹೊತ್ತಿನಲ್ಲಿ :

*ನಿಷೇಧ ಮಾಡಬೇಡಿ ಕೊಲ್ಲುವವರನ್ನು*
*ಇನ್ನಷ್ಟು ಕೊಲ್ಲಬೇಕು ನನ್ನಂತಹವರನ್ನು*
*ಕೊಲ್ಲುವವರು ಹಸುವಿನ ಹಾಲು ಕುಡಿಯುತ್ತಾರೆ*
*ಕೊಲ್ಲಲ್ಪಡುವವರು ತಾಯಿ ಹಾಲು ಕುಡಿಯುತ್ತಾರೆ*
(ಕೊಲ್ಲುವವರು ಹಸುವಿನ ಹಾಲು ಕುಡಿಯುತ್ತಾರೆ)

ಆಳುವ ವರ್ಗದವರನ್ನು ಗೇಲಿ ಮಾಡುತ್ತಲೇ ತನ್ನಲ್ಲಿನ ಸಹಿಸುವ ಶಕ್ತಿಯನ್ನು ಎತ್ತಿಹಿಡಿಯುತ್ತಾರೆ :

ನಾನೆಷ್ಟು ವಿನಯವಂತ ಮತ್ತು ಕರುಣಾಳು ಎಂದರೆ ನನಗಾದ ದುಃಖವನ್ನು ಹಸಿದ ಹೊಟ್ಟೆ

*ಅನ್ನ ಮುಕ್ಕುವಂತೆ ಮುಕ್ಕುತ್ತೇನೆ*
*ಎಂಜಲಾಗದ ಕೈ ಬಾಯಿಗಳಿಗೆ*
*ನಿರಾಶೆಯಾಗದಿರಲೆಂದು ತೇಗಿ ಸುಧಾರಿಸಿಕೊಳ್ಳುತ್ತೇನೆ*
(ಅಳಿಸಲಾಗದ ಅಳುವಿನಂತೆ)

ಬೆನ್ನಿಗಿರುವ ಅವಮಾನ, ನೋವನ್ನಷ್ಟೇ ಕವಿತೆಯಲ್ಲಿ ತಲಬಲ್ಲೆ ಎನ್ನುವಂತೆ ಬರೆಯುವ ಕವಿ ತನ್ನ ಕವಿತೆ ಅನ್ಯವನ್ನು ನುಡಿಯದು ಏಕೆ? ಎನ್ನುವುದಕ್ಕೆ ಕೊಡುವ ಕಾರಣ ಮಾರ್ಮಿಕವಾಗಿದೆ:

*ನಲ್ಮೆಯ ಹೊಲಗೇರಿ*
*ಕಲ್ಪಗಿನ ಸ್ಲೇಟಾಗಿದ್ದರೆ*
*ಬಿಳೀಯ ಪದ್ಯ ಬರೆಯಬಹುದಿತ್ತು*
(ಒಂದು ಹೊರೆ ಸೌದೆಯಷ್ಟು)

ದಲಿತರ ಕೇರಿಯಲ್ಲಿ ನಿಂತುಕೊಂಡು ಲೋಕವಾಸನೆಯನ್ನು ಕಾವ್ಯವಾಗಿಸುವ ಅಪರೂಪದ ಕವಿ ಎನ್. ಕೆ. ಹನುಮಂತಯ್ಯ 'ಹಿಮದ ಹೆಜ್ಜೆ' (೧೯೯೮), 'ಚಿತ್ರದ ಬೆನ್ನು' (೨೦೦೬) ಇವರ ಪ್ರಕಟಿತ ಕವನ ಸಂಕಲನಗಳು.

*ನೀವು ಮಹಾತ್ಮರು*
*ನಿಮ್ಮ ನೆರಳಲ್ಲಿ ಹಸಿವಿನ ಹಿಮತಂತಿಯಿಂದ ನನ್ನನ್ನು*
*ಕಟ್ಟಿದಿರಿ*
*ಬಿಸಿ ಕುಲ ಮಲಗಳ ತಿನ್ನಿಸಿ ಉಳಿಸಿದಿರಿ ನನ್ನನ್ನು*
*ಅಳಿಸಿದಿರಿ ನೆನಪನ್ನು*
(ಯಜಮಾನರಿಗೊಂದು ಪತ್ರ)

ಹಸಿವು ಮತ್ತು ಅವಮಾನದೊಂದಿಗೆ ಏಗುತ್ತಾ ಬಂದಿರುವ ಸಮುದಾಯ ತನ್ನ ಅಸ್ತಿತ್ವದಲ್ಲಿ ಸೇರಿಹೋಗಿರುವ ಕಣ್ಣೀರಿನೊಂದಿಗೆ ಇಲ್ಲಿಗೆ ಬಂದಿದೆ:

*ಅಸ್ಪೃಶ್ಯ !*
*ಹೌದು; ನಾನು ವಿದ್ಯುತ್ತಿನ ಹಾಗೆ*
*ನಿಮ್ಮ ತಣ್ಣನೆಯ ಸ್ಪರ್ಶಕ್ಕೆ*
*ಸಿಕ್ಕಲಾರೆ*
*ಅಸ್ಪೃಶ್ಯ !*
*ಹೌದು; ನಾನು ಗೋವು ತಿಂದು*
*ಗೋವಿನಂತಾದವನು*
(ಗೋವು ತಿಂದು ಗೋವಿನಂತಾದವನು)

ಗೋವು ದಲಿತರ ಸಹಜವಾದ ಆಹಾರ. ಹಿಂದೂಧರ್ಮದ ನೆರಳಲ್ಲಿ ಅಥವಾ ಪಾವಿತ್ರ್ಯತೆಯ ಸೋಗಿನಲ್ಲಿ 'ಗೋವು ನಿಷೇಧ' ಕಾನೂನು ಜಾರಿಗೊಳಿಸಲು ಸಂಚು ರೂಪಿಸಿದ ಪಠಭದ್ರರಿಗೆ ಉತ್ತರರೂಪದ ಪ್ರತಿಕ್ರಿಯೆ ಇದು. ಗೋವನ್ನು ತನ್ನ ಸಮುದಾಯದ ರಕ್ತದಲ್ಲಿ ಅದರ ಸ್ವಭಾವದಲ್ಲಿಯೆ ಕಾಣುತ್ತಿರುವ ಕವಿ ಅದಕ್ಕೊಂದು ತಾತ್ತ್ವಿಕ ರೂಪವನ್ನು ನೀಡುವಲ್ಲಿ ಸಫಲರಾಗಿರುವರು. ಕಾಲದ ಒತ್ತಾಯಗಳು, ಕೇಡುಗಳನ್ನೇ ಸಲಕರಣೆಯನ್ನಾಗಿ ಬಳಸಿಕೊಂಡು ಮಹಾಪ್ರತಿಮೆಯೊಂದನ್ನು ಸೃಷ್ಟಿಸಬಹುದೆಂಬುದಕ್ಕೂ 'ಗೋವು ತಿಂದು ಗೋವಿನಂತಾದವನು' ಕವಿತೆ ಉತ್ತಮ ಉದಾಹರಣೆಯಾಗಿ ನಮ್ಮ ಮುಂದಿದೆ :

*ಅಗ್ನಿ ಮಾಂಸದ ಕುಲುಮೆಯಲಿ*
*ನನ್ನ ಕಾಯಿಸಿ ಬಣ್ಣವ ಮಾಡಿ*
*ಮರಳಿ ತನ್ನ ರೂಪನೇ ಕಡೆವ*
*ಏ ನನ್ನಾಳದ ಅಳುವೇ*
*ನನ್ನ ಚಿತ್ರಕ್ಕೇಕೆ ಬೆನ್ನ ಬರೆವೆ* (ಚಿತ್ರದ ಬೆನ್ನು)

ಬಹುಶಃ ತುಳಿತಕ್ಕೊಳಗಾದ ಸಮುದಾಯ ಮಾತ್ರವೆ ಒಂದು ಚಿತ್ರಕ್ಕೂ ಬೆನ್ನಿರುವುದನ್ನು ಕಲ್ಪಿಸಿಕೊಳ್ಳಬಲ್ಲದು :

*ಚಮ್ಮಾರನ ಜೋಡು ಮೆಟ್ಟಿ*
*ಕಮ್ಮಾರನ ಖಡ್ಗ ಹಿಡಿದು ಕಾಯುತಾನಲ್ಲೋ*
*ರಾಜ ಕಾಯುತಾನಲ್ಲೋ*
*ನೇಕಾರನ ಉಡುಗೆಯುಟ್ಟು*
*ಹೂಗಾರನ ಹೂವ ಮುಡಿದು*
*ಕಾಯುತಾನಲ್ಲೋ ರಾಜ ಕಾಯುತಾನಲ್ಲೋ* (ಕಾಯುತಾನಲ್ಲೋ)

ಕಾಯುವ ಪ್ರಭುತ್ವದ ಶಕ್ತಿಗಳೇ ಸಮುದಾಯವನ್ನು ನಿಯಂತ್ರಿಸುವ ಅದಕ್ಕಾಗಿ ಸಮುದಾಯಗಳು ನೇರವಾಗಿ ಅಲ್ಲದಿದ್ದರೂ ಪರಸ್ಪರ ಸಹಕರಿಸುತ್ತಿರುವ ನಾಟಕಿಯತೆಯನ್ನು ನಾವಿಲ್ಲಿ ಕಾಣುತ್ತೇವೆ. ದಲಿತಕಾವ್ಯವೆಂದರೆ ಅದು ಆವೇಶದ ಇಲ್ಲವೆ ಸ್ವಮರುಕದಲ್ಲಿ ವಿರಮಿಸುವಂಥದ್ದು ಎನ್ನುವ ರೂಢಿಮಾತುಗಳನ್ನು ಭಂಜಿಸುವ ಎನ್.ಕೆ. ಹನುಮಂತಯ್ಯ ದಲಿತ ಕಾವ್ಯದ ಬಾಹುಗಳು ಎಷ್ಟು ವಿಶಾಲ ಎಂಬುದನ್ನು 'ಹೆಜ್ಜೆಯ ಹಿಂದೆ' ಕವಿತೆಯಲ್ಲಿ ಕಾಣಿಸುತ್ತಾರೆ. 'ಎಲ್ಲಾದರೂ' ಎಂದು ಮತ್ತೆ ಮತ್ತೆ ಬರುವ ಈ ಕವಿತೆಯಲ್ಲಿ ದಲಿತ ಕಾವ್ಯಕ್ಕೆ ಇದ್ದ ಗಡಿಯನ್ನು ದಾಟಿ ಹೋಗಿದೆ.

*ಬಾ ಗೆಳತಿ*
*ಚೂರಾದ ಮುಖಗಳನು ಆಯೋಣ*
*ಎಲ್ಲಾದರೂ*
*ನಗು ಮೆತ್ತಿಕೊಂಡಿದ್ದರೆ*
*ನಮ್ಮ ತುಟಿಗಳಿಗೆ ತುಂಬಿಕೊಳ್ಳೋಣ*
*ಎಲ್ಲದರೂ*
*ಅಳು ಅಂಟಿಕೊಂಡಿದ್ದರೆ*
*ನಮ್ಮ ಕಣ್ಣುಗಳಿಗೆ ಬಸಿದುಕೊಳ್ಳೋಣ*
*ಬಾ ಗೆಳತಿ*
*ಚೂರಾದ ಎದೆಗಳನು ಆಯೋಣ*
*ಎಲ್ಲದರೂ ಹದವಿದ್ದರೆ*
*ಅಲ್ಲಿ ಬೀಜಗಳಾಗಿ ಮೊಳೆಯೋಣ* (ಹೆಜ್ಜೆಯ ಹಿಂದೆ)

ಇದೇ ಆಶಯ ಒಂದು ಸಣ್ಣ ತೊರೆಯಾಗಿ ಕವಿ ವೀರಣ್ಣ ಮಡಿವಾಳರ ಕಾವ್ಯದಲ್ಲಿ ಮುಂದುವರೆಯುತ್ತಿದೆ. ಪುಟ್ಟ ಸಮುದಾಯದ ಪ್ರತಿನಿಧಿಯಾಗಿ ಬರೆಯುತ್ತಿರುವ ವೀರಣ್ಣನವರ ಪ್ರಕಟಿತ ಕವನ ಸಂಕಲನ 'ನೆಲದ ಕರುಣೆಯ ದನಿ' (೨೦೧೦).

*ನಾನೀಗ ರೂಪಾಂತರಕೆ ಹಾತೊರೆವ ಜೀವಬೀಜ*
*ಮಳೆ ಬಂದೇ ಬರುತ್ತದೆ ಮಣ್ಣು ಪೊರೆಯುತ್ತದೆ*
*ಗಾಳಿ ಬದುಕ ನೀಡುತ್ತೆ* (ಜೀವ ಬೀಜದ ಪಿಸುಗಾನ)

ಈ ಭರವಸೆಯನ್ನು ಆತುಕೊಂಡು ಬರೆಯುತ್ತಿರುವಾಗಲೂ ಕವಿಯ ಗಮನವಿರುವುದು :

*ನೀವು ನನ್ನ ಚರಮಗೀತೆ*

*ಹಾಡುವಾಗಲೂ*

*ನನ್ನ ಧ್ಯಾನ ಎರಡರ ಮೇಲೆ ಮಾತ್ರ*

*ಒಂದು ಪ್ರತಿರೋಧ*

*ಮತ್ತೊಂದು ಪ್ರಿಯತಮೆ* (ಎರಡರ ಮೇಲೆ)

ಹೀಗೆ ನುಡಿಸುತ್ತಿರುವುದು ಸಮುದಾಯದ ಕಸುಬು. ಆ ಕಸುಬಿನೊಂದಿಗೆ ಬೆರತುಹೋಗಿರುವುದು ಈ ನೆಲದ ಭಿನ್ನಭೇದಭಾವ :

*ಊರ ದೇವರ ದಿಬ್ಬಣ*

*ಬೀದಿಯಲಿ ಬರುವಾಗ*

*ನಾವೇ ಹಡದಿ ಹಾಸಿಗೆಯಾಗಿ ಬಿದ್ದುಕೊಂಡೆವು*

*ಮಣ್ಣವಪ್ಪಿದ ಮಡಿಬಟ್ಟೆಯನು*

*ಪಲ್ಲಕ್ಕಿ ಹೊತ್ತ ನೀವು ತುಳಿದಿರಿ*

*ನಾವು ಎಷ್ಟೇ ನಲುಗಿದರೂ*

*ದೇವರು ನಮ್ಮನ್ನು ಮುಟ್ಟಲೇ ಇಲ್ಲ* (ಹಡದಿ ಹಾಸುವ ಅಗಸರ ಹಾಡು)

ಮುಟ್ಟಿಸಿಕೊಳ್ಳದವರ ನಡುವೆ ಮೇಲು ಜಾತಿಗಳಿಗೆ ಹಾಸುಗಲ್ಲಾಗಿ ಬಾಳುತ್ತಿರುವಾಗಲೂ:

*ನಾವು ಮತ್ತೆ ಮತ್ತೆ ಕನಿಕರಿಸುತ್ತೇವೆ*

*ಸಿಂಹಾಸವನೇರಿ ಕೇರಿ ಮರೆತ ಊರಿಗೆ* (ಕೇರಿ ಮರೆತ ಊರಿಗೆ)

ಕೇರಿ ಮರೆತು ಮೆರೆಯುತ್ತಿರುವ ಊರೆಂಬ ಯಜಮಾನ್ಯವನ್ನು ಜರಿದರು ಸಮುದಾಯದ ಆತ್ಮವಿಶ್ವಾಸ ಇದು :

*ನಮ್ಮ ನಡಿಗೆ ಆನೆ ಹಿಂಡಿನ ಹಾಗೆ*

*ದಿಕ್ಕು ದಿಕ್ಕಿನ ಕೂಗಿದು ನಿಲ್ಲದ ಕೊರಳ ಗಾನ*

*ಹಾಡುತ್ತೇವೆ*

*ನಮ್ಮ ಅನ್ನ ನಾವೇ ಉಣ್ಣುವವರೆಗೆ* (ಭೂಮಿ)

ಈ ಭಾವಕ್ಕೆ ಹೆಗಲುಕೊಟ್ಟಂತೆ ಬರೆಯುತ್ತಿರುವ ಕವಿ ಟಿ. ಯಲ್ಲಪ್ಪ. 'ಕಡಲಿಗೆ ಕಳಿಸಿದ ದೀಪ' (೨೦೧೦) ಇವರ ಪ್ರಕಟಿತ ಕವನ ಸಂಕಲನವಾಗಿದೆ.

*ಯಾರ ಬದುಕಿನ ದಾರಿಗೆ*

*ಟಾರಾದೆ ನೀನು*

*ಯಾರ ಪಯಣದ ತುಳಿತಕ್ಕೆ*

*ದಾರಿಯಾದೆಯೋ ನೀನು* (ಒಡಲಾಳದಿಂದ)

ದೇವನೂರ ಮಹಾದೇವರ 'ಡಾಂಬರು ಬಂದುದು' ಕಥೆಯೊಂದಿಗೆ ಸಾವಯವ ಸಂಬಂಧ ಹೊಂದಿರುವ ಈ ಮಾತುಗಳಲ್ಲಿ ಪ್ರಶ್ನೆ - ಎಚ್ಚರದೊಂದಿಗೆ ಚಲಿಸುತ್ತಿರುವ ಸಮುದಾಯವೊಂದು ಕಣ್ಣಮುಂದೆ ನಿಲ್ಲುತ್ತದೆ :

*ನಾನು*
*ನಿಮ್ಮ ಕೈಯ್ಯ ದಾಳವಾದರೂ*
*ಭಾನುಮತಿಯ ನೆತ್ತದಲಿ*
*ಚಿತ್ತ ತೆರದಿಡುವ ಕರ್ಣನ*
*ನನ್ನಿಯೇ ಹೊರತು*
*ಶಕುನಿಯ ಸೋಗಲಾಡಿತನ ನನಗಿಲ್ಲ* (ಸೊಲ್ಲು)

ವರ್ಗ, ಜಾತಿಗಳಲ್ಲಿ ಚದುರಿಹೋಗಿರುವ ಸಮಾಜದಲ್ಲಿ ಜೀವಿಸುತ್ತ ಹಾಗೆ ಜೀವಿಸುತ್ತಲೇ ಹೊರಗಾಗಿ ನಿಜ ನುಡಿಯಬೇಕಾದಾಗ ಎದುರಾಗುವ ಸವಾಲಿದು. ಶೋಷಣೆಗೆ ಒಳಗಾಗಿಯೂ ತ್ಯಾಗಕ್ಕೆ ಬದ್ಧವಾಗಿರುವ ಕವಿಗೆ ಕರ್ಣನ ನಿಜದೊಟ್ಟಿಗೆ ತನ್ನ ಇರುವಿಕೆಯ ಕಂಡುಕೊಂಡರೂ :

*ನೀನು*
*ಬಯಲ ಕಾಣಲೆಂದೇ*
*ಬೆತ್ತಲಾದವಳು*
*ನಾನು ಬೆತ್ತಲಾಗಲೆಂದೇ*
*ಬಯಲಿಗೆ ಬಂದವನು* (ಬಯಲ ಹಾಡು)



ಅನ್ನಿಸುವುದು. ಚೌಕಟ್ಟಿನೊಳಗೆ ಬಾಳುವುದನ್ನು ಒಲ್ಲೆ ಎಂದು ಹೊರಬಂದ ಅಕ್ಕ ಮಹಾದೇವಿಯ ಹುಡುಕಾಟದ ಪಯಣ, ಸಮುದಾಯದ ಬೆಂಕಿಯೊಳಗಿಂದ ಎದ್ದು ಬಂದು ಎಲ್ಲವನ್ನು ಕವಿತೆಯ ಮೂಲಕ ಬಸಿದುಕೊಡುತ್ತಿರುವ ಪಯಣವು ಅಭೇದವಾದದ್ದು ಕವಿಗೆ. ಒಳಹೊರಗಿನ ಸೀಮೆಯಿಲ್ಲದೆ ಅನುಭವ ತೊಡಿಸಿದ್ದೆಲ್ಲವನ್ನು ಕಳಚಿಡುವ ಅಗ್ನಿದಿವ್ಯದ ಈ ಹಾದಿಯಲ್ಲಿ:

*ಭಯವ ತರುವುದಿದೆ*
*ಬಸಿರ ಕಿವುಚದಿರು*
*ಹೊಸತು ಬರುವುದಿದೆ ಭೂಮಿಗೆ* (ಸಮಾಧಿ ಗೀತೆ)

ಎಂಬ ನಂಬುಗೆಯ ಆಳದಲ್ಲಿ ಸಮುದಾಯವೊಂದು ಸ್ವಾತಂತ್ರ್ಯವಾಗಲು ಸಜ್ಜಾಗುತ್ತಿರುವುದನ್ನು ಕಂಡುಕೊಳ್ಳಬಹುದು.

ಮುಸ್ಲಿಂ ಸಂವೇದನೆಯ ಮೂಲಕ ಮನುಷ್ಯನ ಕೇಡನ್ನು ಕುರಿತು ಮಾತನಾಡುತ್ತಿರುವ ಕವಿ ಆರಿಫ್ ರಾಜಾ. 'ಜಂಗಮ ಫಕೀರನ ಜೋಳಿಗೆ' (೨೦೦೯) ಇವರ ಪ್ರಕಟಿತ ಕವನ ಸಂಕಲನವಾಗಿದೆ. ಕಳೆದ ಶತಮಾನದ ಕಡೆಯ ಭಾಗದಲ್ಲಿ ಧಾರ್ಮಿಕ ಕೇಂದ್ರಗಳ ರಾಜಕೀಯ ಹಿತಾಸಕ್ತಿಯು ಹಲವು ಸಮುದಾಯದ ಅಸಂಖ್ಯಾತ ಜನರ ಪ್ರಾಣವನ್ನು ಬಲಿತೆಗೆದುಕೊಂಡಿತು. ಈ ಕಹಿ ನೆನಪು ಕವಿಯಿಂದ ನುಡಿಸುತ್ತಿರುವುದು :

*ಮಸೀದಿ ಮಂದಿರ ಕೆಡವಿ ತಾಜ್‌ಮಹಲು ಕಟ್ಟಬೇಕಾಗಿದೆ*
*ವಸಂತನನು ಕರೆತರಲು ಈ ಕಲಿಗಾಲದಲಿ*
*ಮಲ್ಲಿಗೆತೋಟ ಬೆಳೆಸಬೇಕಾಗಿದೆ*

*ಮಲಗಿದಮಸಣ ಹುಚ್ಚೆದ್ದು ಕುಣಿಯುತ್ತದೆ*
*ಹೊಸಹಾಡು ಹಾಡಬೇಕಾಗಿದೆ* (ಜಂಗಮ ಫಕೀರನ ಜೋಳಿಗೆ)

ಧರ್ಮದ ಅಫೀಮು ತಿನ್ನುತ್ತಿರುವವರು ಕೇವಲ ನಿರ್ಜೀವವಾದ ಸಂಕೇತಗಳಿಗಾಗಿ ಬಡಿದಾಡುತ್ತಿರುವುದನ್ನು ನೋಡಿರುವ ಕವಿಗೆ ಪ್ರೀತಿಗೆ ಅನ್ವರ್ಥವಾಗಿರುವ ತಾಜ್‌ಮಹಲ್ ಕಟ್ಟುವ ಹಂಬಲ ಆದರೆ ವರ್ತಮಾನದಲ್ಲಿ ಕವಿ ಎದುರಿಸುತ್ತಿರುವ ಕಷ್ಟವಿದು.

*ನಮಗೆ ಮನೆ ಕೊಡುವುದಿಲ್ಲವಂತೆ*
*ನಗರದಲ್ಲಿ ನಮಗೆ ಬಾಡಿಗೆ ಮನೆ ಸಿಗುವುದಿಲ್ಲವಂತೆ*
*ಏಕೆಂದರೆ ನಾವು*
*ಗಡ್ಡಬಿಟ್ಟಿರುತ್ತೇವೆ, ದನದ ಮಾಂಸ ತಿನ್ನುತ್ತಿರುತ್ತೇವೆ*
*ಕರ್ಫ್ಯೂ ಹೇರಿದಂತಿರುವ ತುರ್ತುಪರಿಸ್ಥಿತಿಯ ನಡಾವಳಿಗಳು ನಮ್ಮನ್ನು ಅನುಮಾನದಿಂದಾ ಕಾಡುತ್ತದೆ*
*ಕ್ರೀಡೆಗಳಲ್ಲಿ ಸೇನೆಗಳಲ್ಲಿ ಸೌಹರ್ದಸಂಬಂಧಗಳಲ್ಲಿ*
(ನಮಗೆ ಮನೆ ಕೊಡುವುದಿಲ್ಲವೆಂತೆ)

ಈ ಇಕ್ಕಟ್ಟಿನ ಮಧ್ಯೆಯೂ ಕೇಳಿಕೊಳ್ಳುತ್ತಿರುವ ಪ್ರಶ್ನೆ :

*ಹೇಳು*
*ನದಿಯೇ ಹರಿಯದ ದೇಶದಲಿ*
*ದ್ರಾಕ್ಷಾರಸ ಅರಸುವುದು ಎಷ್ಟು ನ್ಯಾಯ?* (ಚರಿತ್ರೆಯ ಮಹಾಕುಡುಕರು ನಾವು)

ಇಂತ ಪ್ರಶ್ನೆಯೇ ವಿಷಾದದಲ್ಲಿ ರೂಪಾಂತರವಾಗಿರುವುದು:

*ಮಣ್ಣಿನಗೊಂಬೆ ಮಾಡಿ ಜೀವ ಊದಿದವನೇ ಶರಣು ಎನ್ನುವೆ*
*ಪಾಪದ ಮನೆಯ ಸಿಂಹಾಸನ ಉರಿಯುತಿದೆ ನೀತಿ ಇಲ್ಲದೆ*
*ನಾಕು ಹನಿ ಕಣ್ಣೀರಾದರೂ ಸುರಿಸು*
*ನರಕದ ಬೆಂಕಿ ಆರಿಹೋಗಲಿ* (ಕರ್ಬಲಾ ಕುಣಿತ)

ಎಂದು ಪ್ರಾರ್ಥಿಸುತ್ತಿರುವ ಕವಿ ಅರಸುತ್ತಿರುವುದು ತಾಯ್ತನವನ್ನು; ಇವೆಲ್ಲವನ್ನೂ ಸರಿದಾರಿಗೆ ತರಲು, ಪೊರೆಯಲು ಹೆಂಗರುಳಿನ ಅಗತ್ಯತೆಯನ್ನು ಒತ್ತಿ ಹೇಳುವ ಕವಿ ಅದನ್ನು ತನ್ನ ಕೌಟುಂಬಿಕ ನೆಲೆಯಲ್ಲಿ ನಿಂತು ಹೊಲಿಗೆಯಂತ್ರದ ಹೋಲಿಕೆಯೊಂದಿಗೆ ಕಟ್ಟಿಕೊಡುತ್ತಿರುವುದು :

*ರೊಟ್ಟಿ ಪಾಲು ಮಾಡಿದಂತೆ ಬಟ್ಟೆ ಗಡಿಕೊರೆದು*
*ಕತ್ತರಿಸುವ ಅಮ್ಮಿ ತುಂಡು ತುಂಡು ಸೇರಿಸಿ*
*ಹೊಲಿದು ಒಂದು ಮಾಡುತ್ತಾಳೆ*
*ಒಂದು ಕೈಯಲ್ಲಿ ಕತ್ತರಿ :*
*ಮುಖವಾಡ ಒಡೆದು ಬಯಲಾಗಲು*
*ಮತ್ತೊಂದು ಕೈಯಲ್ಲಿ ಸೂಜಿ :*
*ಲೋಕದ ಮಾನ ಕಾಪಾಡಲು*

*ಚಂದಿಮನಸುಗಳ ಜೋಡಿಸಲು ಸೂಜಿ ಇದೆ*
*ಗೋಲವಿಶ್ವ ದಾರಿ ಸಾಗಲು ರಾಟೆ ಇದೆ*
*ಲೋಕವಿಕಾರಗಳನು ಕಡಿದು ಹಾಕಲೆಂದೇ*
*ಕೈಯಲ್ಲಿ ಕತ್ತರಿ* (ಹೊಲಿಕೆಯಂತ್ರದ ಅಮ್ಮಿಯ ಕವಿತೆಗಳು)

ಒಟ್ಟುಗೂಡಿಸುವ ಸೂಜಿಯೂ ವಿಕಾರಗಳನ್ನು ಕತ್ತರಿಸಿಹಾಕುವ ಕತ್ತರಿಯ ಗುಣವನ್ನೂ ಅಳವಡಿಸಿಕೊಳ್ಳಬೇಕಿದೆ ನಾವು.

**೧. ಆಧುನಿಕ ಜೀವಲಯದ ನಿರೂಪವಾಗಿ ಕಾವ್ಯ**

ವರ್ತಮಾನ ಯಾವಾಗಲೂ ಭೂತಕಾಲದ ಫಲಿತವಾಗಿ ಅಂಗೈಯಲ್ಲಿ ಇರುತ್ತದೆಯಾದರಿಂದ ಆಧುನಿಕ ಜೀವನವನ್ನು ಅದರೆಲ್ಲಾ ಪರಿಣಾಮವನ್ನು ಅನುಭವದಲ್ಲಿ, ದೈನಿಕದ ವಿವರಗಳಲ್ಲಿ ಕಾಲಸೂಚಕ ವಾಚನೆಗಳಲ್ಲಿ ಕಂಡುಕೊಳ್ಳುತ್ತಿರುವ ಪ್ರಯತ್ನ ಹೊಸ ಶತಮಾನದ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತಿದೆ. ಮುಖ್ಯವಾಗಿ ಈ ದಶಕ ಹಲವು ರೂಪಗಳಲ್ಲಿ ಹಿಂಸೆಯನ್ನು ಅನುಭವಿಸಿರುವುದರಿಂದ ಇದರ ಕುರಿತು ಹೆಚ್ಚಾಗಿ ಮಾತನಾಡುವ ಕವಿಗಳು ಸಹಜವಾಗಿಯೆ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಪ್ರಕ್ರಿಯೆಯನ್ನು ಗಮನಿಸಿದರೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರು ಹೇಳಿದ್ದ ಮಾತು ನೆನಪಿಗೆ ಬರುತ್ತದೆ.

*'ಈ ಶತಮಾನದ ಬಹುಪಾಲನ್ನು ಕಾಡಿದ ರಾಜಕೀಯ*
*ಮೂಲಭೂತವಾದದ ಯುಗವೇನೋ ಕೊನೆಯಾಗುತ್ತಿದೆ*
*ಆದರೆ, ಅವರ ಜಾಗವನ್ನು ಧಾರ್ಮಿಕ ಮೂಲಭೂತವಾದ*
*ಆಕ್ರಮಿಸುವ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿವೆ'*
(ಮಹಾಪಲಾಯನ; ಹಾವಾನುವಾದ, ಲೇಖಕನ ಮಾತು)

ಇದು ನಿಜವಾಗುತ್ತಿದೆಯೇನೊ ಅನ್ನಿಸುವಂತೆ ಗುಜರಾತ, ಮೈಸೂರಿನ ಕ್ಯಾತಮಾರನ ಹಳ್ಳಿ, ಹಿನಕಲ್ ಈ ಉತ್ತರ ಕರ್ನಾಟಕದ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ, ಹಳ್ಳೀಗಳಲ್ಲಿ ಧಾರ್ಮಿಕ ಕೇಂದ್ರಗಳನ್ನು ಮುಕ್ಕಾಗಿಸುವ ಮೂಲಕ ಮನಸು ಮುರಿಯುವ ಪ್ರಕರಣಗಳಾಗುತ್ತಿವೆ. ಸಂದರ್ಭ ಹೀಗಿರುವಾಗ ಹೃದಯದ ಬಿಂಬವೂ ಆಗಿರುವ ಕಾವ್ಯ 'ಇಂತಹ ಅನೇಕ ಪ್ರಕರಣ'ಗಳನ್ನು ಒಳಗೊಳ್ಳುತ್ತಾ ಮಾತನಾಡುತ್ತಿರುವುದು. ಈ ಸಾಲಿನಲ್ಲಿ ಕವಿ ವಸಂತ ಬನ್ನಾಡಿ ಇದ್ದಾರೆ. 'ಕಡಲಧ್ಯಾನ' (೨೦೦೨), 'ನೀಲಿ ಹೂ' (೨೦೦೩), 'ನಿಜದ ನೆಲೆ' (೨೦೦೪), 'ಮೀನಿನ ಹೊಳಪನ್ನು ನೀರಿಗೇ ಬಿಟ್ಟು' (೨೦೦೮) ಇವರ ಪ್ರಕಟಿತ ಕವನ ಸಂಕಲನಗಳು.

*ಎಲ್ಲಿರುವಿ ನೀನು?*
*ಎಚ್ಚರವೋ*
*ಅರೆ ನಿದ್ದೆಯೋ (ಕವಲೊಡೆದ ದಾರಿ)*

ಹೀಗೆ ತನ್ನ ಎದುರಿಗಿರುವ ವ್ಯಕ್ತಿ ಅಥವಾ ಸಹೃದಯನನ್ನು ಅಲ್ಲಾಡಿಸಿ ಕೇಳುವ ಇಚ್ಛೆ ಕವಿಗೆ. ಮೊದಲು ಇದನ್ನೇ ಖಾತ್ರಿಪಡಿಸುತ್ತಿರುವುದಕ್ಕೆ ಕಾರಣ :

*ಸಿನಿಮಾ ನೋಡುವಾಗ*
*ಈಗಷ್ಟೇ ಚಲಿಸಿದ*
*ಚಿತ್ರಿಕೆಯ ನೆನಪೆ*
*ನೋಡುವವರಿಗೆ ಇರುವುದಿಲ್ಲ*

*ಆದುದರಿಂದ ಅವರು*
*ಸಿನಿಮಾ ನೋಡುತ್ತಾರೆ (ಎಲ್ಲವೂ ಚಲಿಸುತ್ತಿದೆ)*

ಬದುಕಾಗಲಿ ಸಮಕಾಲೀನ ಸಂದಿಗ್ಧತೆಗಳನ್ನಾಗಲಿ ಸಿನಿಮಾ ನೋಡುವಂತೆ ನೋಡಿ ಸುಮ್ಮನಿರುವುದಕ್ಕಾಗಲಿ ಅಥವಾ ಮರೆತು ಮುಂದಕ್ಕೆ ಹೋಗುವುದಾಗಲಿ ಮನುಷ್ಯರಾದವರಿಗೆ ಆಗದು. ಆದರೆ ಎಲ್ಲವನ್ನೂ ಸಿನಿಮಾದಂತೆ ಭಾವಿಸುತ್ತಿರುವ ಜನಸಮುದಾಯವೊಂದು ತಲೆ ಎನ್ನುತ್ತಿದೆ ಅಂತವರ ನಮೂನೆ :

*ಬದಲಾಗಿದೆ ಎಲ್ಲ*
*ನೆಲ ಹವೆ ಗಾಳಿ ಕಣ್ಣಿನ ಕಾತರ*
*ಇಸ್ತ್ರಿ ಮಾಡಿದಂತೆ ವಿವೇಚನೆ (ಉರಿವ ನಾಲಗೆಯಾಗಿ ಕಾಡಿದರೂ)*

ಈ ವಿವೇಚನೆಗೆ ಉದಾಹರಣೆಯಂತಿದೆ ಕವಿ ಕೊಡುತ್ತಿರುವ ಚಿತ್ರ :

*ಖೇದ ತುಂಬಿ ನೋಡುತ್ತೇನೆ*
*ನಿನ್ನೆ*
*ನನ್ನ ನಾಟಕದಲ್ಲಿ*
*ದೇವಸ್ಥಾನ ಯಾರೇ ಕೆಡವಿದರೂ ತಪ್ಪು ಎಂದು*
*ನುಡಿವ ಬಸವಣ್ಣನ ಪಾತ್ರ ವಹಿಸಿದ ಗೆಳೆಯ*
*ಇಂದು*
*ಕೆಡವಲು ಕಚ್ಚೆಬಿಗಿದು ಹೊರಟವ ಗುಂಪಿನ*
*ಮುಂಚೂಣಿಯಲ್ಲಿ*
*ಕತ್ತಿ ಝಳಪಿಸಿ ರಣಕೇಕೆ ಹಾಕುತ್ತಿರುವುದ*
(ಕೆಡವಲು ಹೊರಟವರು)

ದಯವೇ ಧರ್ಮದ ಮೂಲವೆಂದು ನಂಬಿದ್ದ ಬಸವಣ್ಣ ಈ ಕಾಲದ ಧರ್ಮಾಂಧತೆಗೆ ಪರ್ಯಾಯ ಆದರ್ಶವೂ ಆಗಿದ್ದಾನೆ. ಆದರೆ ಬಸವಣ್ಣನ ಪಾತ್ರವಹಿಸಿದ ನಟನಿಗೆ ಆ ಗುಣ ಕಿಂಚಿತ್ತೂ ಸೇರಿಕೊಳ್ಳದೆ ಹೋಗಿರುವುದು ಮತದ ಮರುಳುಗಳು ಹೆಚ್ಚುತ್ತಿರುವುದನ್ನೆ ಸೂಚಿಸುತ್ತಿದೆ. ಇಂಥದ್ದೆ ವೈಚಿತ್ರ್ಯ ಇನ್ನೊಂದರಲ್ಲಿದೆ :

*ಪತ್ರಿಕೆಗಳಲ್ಲಿ*
*ಕೊಲ್ಲಲು ಸಂಜ್ಞೆ ನೀಡಿ*
*ಸುಮ್ಮನೆ ನೋಡುತ್ತಿರುವವರ*
*ಪೆಪ್ಪರಮಿಂಟು ಹೇಳಿಕೆಗಳಿದ್ದವು* (ಕಡಲು ಮೊರೆಯುತ್ತಿದೆ)

ಈ ಎಲ್ಲವೂ ಮಹಾತ್ಮರ ಆದರ್ಶಗಳನ್ನು ಕಂಡ ಕನಸುಗಳನ್ನು ಭಗ್ನಗೊಳಿಸುತ್ತಿರುವುದನ್ನೆ ಸಾರುತ್ತಿದೆ. ಹೀಗಿದ್ದರೂ ಮಹಾತ್ಮರ ಭಾವಚಿತ್ರಗಳು ನಮ್ಮ ಕೈ ಅಳತೆಯಲ್ಲಿಯೇ ಸಿಗುತ್ತಿರುತ್ತವೆ. ಇವೆಲ್ಲಕ್ಕೂ ಸಾಕ್ಷಿರೂಪವಾಗಿರುವ ಮಹಾತ್ಮನ ಭಾವಚಿತ್ರವು ಕವಿಯಿಂದ ಹೀಗೆ ನುಡಿಸುತ್ತದೆ :

*ತೂಗು ಬಿದ್ದಿದ್ದಾನೆ ಅವನು*
*ಗೋಡೆಯ ಮೇಳೆ*
*ಅದೆಷ್ಟೋ ವರ್ಷಗಳಿಂದ*
*ಚಿನ್ನದ ಕಟ್ಟಿನ ಒಳಗೆ*
*ನೋಡುತ್ತೇನೆ :*
*ಸ್ನಾಯುಗಳ ಬಿಗಿದು ಬೀಣೆ*
*ನಗೆಯ ಅಂಟಿಸಿದಂತಿದೆ*
*ಒಳ್ಳೆಯವನಾಗುವುದು*
*ಎಷ್ಟು ಕಷ್ಟ ! (ಒಳ್ಳೆಯವನ ಮೊಗವಾಡ)*

ರಾಜಕಾರಣ ಮತ್ತು ಧಾರ್ಮಿಕ ಕೇಂದ್ರಗಳು ರೂಪಿಸುವ ಮತೀಯ ಹಿಂಸೆಯಷ್ಟೇ ಆಧುನಿಕ ಜೀವನಶೈಲಿಯೂ ಒಂದು ಮಹಾಸಂಗ್ರಾಮದಂತೆ ಕಾಣಿಸುತ್ತಿದೆ. ಬದಲಾಗಿರುವ ಜೀವನ ಕ್ರಮದಲ್ಲಿ ನಗರವಾಸಿಗಳ ಆಯ್ಕೆ - ಆಸಕ್ತಿಗಳು ಬಣ್ಣಗಳಲ್ಲಿ ನಳನಳಿಸುತ್ತಿದೆ ಎನ್ನಲು ಅವಕಾಶವಿದೆಯಾದರೂ ನಗರದವರ ಆಳದಲ್ಲಿನ ಮಹಾತ್ವಾಕಾಂಕ್ಷೆ ಹಾಗೂ ಸ್ವಮಗ್ನತೆಯೇ ದೊಡ್ಡ ಮಾರುಕಟ್ಟೆಯಾಗಿ, ಸುಲಭಕ್ಕೆ ದೊರೆಯುವ ಸಾಮಾನುಗಳಾಗಿ ಹಲವು ಬಗೆಯ ರಿಯಾಯಿತಿಗಳನ್ನು ತೆರೆಯುವಂತೆ ಮಾಡಿದೆ. ಪಂಚೇಂದ್ರಿಯಗಳನ್ನು ಸದಾಕಾಲ ಕಾರ್ಯನಿರತವಾಗಿಡುವಲ್ಲಿ ಯಶಸ್ವಿಯಾಗಿರುವ ಬಂಡವಾಳಿಗರ ಕಂಪನಿ - ಸ್ಟಾಲುಗಳಲ್ಲಿ ಕೇವಲ ಪದಾರ್ಥವಾಗಿ ಕುಂತ ಮನುಷ್ಯನ ಅವಸ್ಥೆಯನ್ನು ಸಾಹಿತ್ಯದ ಇತರ ಪ್ರಕಾರಗಳಂತೆ ಕಾವ್ಯವೂ ಹಿಡಿದಿಡಲು ಪ್ರಯತ್ನಿಸುತ್ತಿದೆ. ಕವಿ ಚೇಮನಹಳ್ಳಿ ರಮೇಶಬಾಬುರವರ 'ಪ್ರಶ್ನೆ ಮತ್ತು ದೇವರು' (೨೦೦೭) ಕವನ ಸಂಕಲನ ಅಂತಹ ಒಂದು ಪ್ರಯತ್ನದ ಭಾಗವಾಗಿದೆ.

*ಬುಡ್ಡಿ ದೀಪದ ಮಬ್ಬು ಬೆಳಕಿನಡಿ*
*ಪುಸ್ತಕ ಹಿಡಿದು ಅಕ್ಷರಕ್ಷರ ಕೂಡಿಸಿ*
*ನಾವು ಓದಿನಲ್ಲಿ ಮಗ್ನರಾದರೆ*
*ನಮ್ಮ ಹರಿದ ಅಂಗಿಗೆ ರೂಪ ಕೊಡಲು*
*ಸೂಜಿದಾರ ಹಿಡಿದು ಕೂರುತ್ತಾಳೆ ಅಜ್ಜಿ*
*ಬುಡ್ಡಿದೀಪ ಅವಳ ಒಕ್ಕಣ್ಣು*
*ಪ್ರೀತಿಯ ಬೆಳಕಿನಲ್ಲೇ ನಾವು ಬೆಳೆದದ್ದು (ಸಮಾಧಿ)*

ಎಂದು ನೆನಪನ್ನು ದಾಟಿಸುತ್ತಿರುವ ಕವಿ ಹಾಗೆ ಬೆಳೆದು ನಗರಕ್ಕೆ ಬಂದ ಮೇಲೆ ಹಳ್ಳಿಯಲ್ಲಿ ಈಗ :

*ಕೋಳಿ ಫಾರ್ಮ್ ಆದ ಕಣ*
*ಪ್ರಾಚ್ಯ ವಸ್ತು ಸಂಗ್ರಹಾಲಯ ಸೇರಿದ ರೋಣಗಲ್ಲು*
*ಈಗ ಎಲ್ಲವೂ ಇತಿಹಾಸ;*
*ಇವನ್ನೆಲ್ಲಾ ಅಪ್ಪ ಅಷ್ಟು ಬೇಗೆ ಹೇಗೆ ಮರೆತ!?*
*ಅಮ್ಮ ಬುತ್ತಿ ಎತ್ತಿಕೊಂಡು ಹೋಗುವುದಿಲ್ಲ*
*ಅಪ್ಪನ ಮೈಯಲ್ಲಿ ಎಂದೂ ಬೆವರು ಮೂಡುವುದಿಲ್ಲ*
*ಪ್ರತಿದಿನವೂ ಸ್ನಾನ ಮಾಡುತ್ತಾನೆ;*
*ಫಳ ಫಳ ಹೊಳೆವ ಬಟ್ಟೆ ಧರಿಸಿ*
*ಸ್ಕೂಟರನ್ನೇರಿ ಪೇಟೆಗೆ ಹೊರಡುತ್ತಾನೆ* (ಒಂದು ನೆನಪಿನ ಮಾರುದ್ದ ಸಾಲು)

ಇದು ಆಧುನಿಕತೆಯ ಗಾಳಿ ಹಳ್ಳಿಯವರೆಗೂ ಹೋಗಿ ತನ್ನದೆಯಾದ ಛಾಪನ್ನು ಮೂಡಿಸಿರುವುದಕ್ಕೆ ಪುರಾವೆ. ಬದಲಾದ ನಗರದಲ್ಲಿ ಇಲ್ಲಿ ಒಡೆಯರು ಬದಲಾದವರು:

*ನಮ್ಮ ಬಾಸ್ ತಲೆ ಬಾಚುವುದಿಲ್ಲ*
*ಸದಾ ಕೆದರಿದ ಕೂದಲು ಮನಸಿನ ಪ್ರತೀಕವೆಂಬಂತೆ*
*ಅವರೊಂದು ಕಾವಿಗೆ ಕುಳಿತ ಕೋಳಿ;*
*ಆದರೂ ಅವರೊಂದು ಎರೆಹುಳ*
*ನಮ್ಮನ್ನೆ ಕೊರೆದು ನಮ್ಮನ್ನೆ ತಿಂದು ಗೊಬ್ಬರವನ್ನಾಗಿಸುತ್ತಾರೆ (ನಮ್ಮ ಬಾಸ್)*

ಈ ರೀತಿಯಾದ ನಗರದೊಳಗಿನ ಅನೇಕ ವಿಕ್ಷಿಪ್ತ ಚಹರೆಗಳನ್ನು ಕವಿ ಮಲ್ಲಿಕಾರ್ಜುನಗೌಡ ತೂಲಹಳ್ಳೀ ಅವರ 'ಶರೀಘನ ಬೊಗಸೆ' (೨೦೦೬)ಯಲ್ಲಿಯೂ ಕಾಣಬಹುದಾಗಿದೆ.

*ಅರೆ!*
*ಕನೆಕ್ಷನ್ನು ಕತ್ತರಿಸಿದರೂ*
*ಕರೆಂಟು ಬಂದೇಬಿಡ್ತು!*
*ಟೀವಿಯೂ ಆನಾಯ್ತು*
*ಎಫ್.ಟೀವಿ ಫ್ಯಾಶನ್ನು ಪಹರೆ*
*ಸ್ಟಾರ್ ಮೂವೀಸಲ್ಲೂ*
*ಕುಣಿಯುತ್ತಾಳೆ ಐಶ್ವರ್ಯ*
*ವಾಷಿಂಗ್ಟನ್ ಸುಟ್ಟರೇನು!*
*ತಾಲಿಬಾನ್ ಸತ್ತರೇನು!*
*ತಾಲ್ ಸೆ ತಾಲ್ ಮಿಲಾ* (ತಾಲ್ ಸೆ ತಾಲ್ ಮಿಲಾ)

ಉನ್ಮತ್ತದಲ್ಲಿ ಮುಳುಗಿರುವ ಸಮೂಹವನ್ನು ಆಂಶಿಕ ವಿವರಗಳಲ್ಲಿ ಹೇಳುತ್ತಲಿರುವ ಕವಿಗೆ ಇಲ್ಲಿನ ಸಂಬಂಧಗಳ ಸ್ವರೂಪವೂ ಕಾಡುತ್ತದೆ ಬಹಳವಾಗಿ :

*ಎಷ್ಟೇ ಗುಡಿಸಿದ್ದರೂ*
*ನಂಟಿನ ಅಂಟುಬಿಡದ ಸಗಣಿ*
*ಈಗ ಬಂಡೆಯ ಮೇಲೆ ಒಣಗಿ*
*ಮೈಯೆಲ್ಲ ಬರಲ ಗೀರುಗೀರು* (ಗೀರುಗಳು)

ಕರಗಲಾರದ ಭಾವ ನಂಟನ್ನು ಬಿಡಿಸಿಕೊಂಡು ಒಣಗುತ್ತಿರುವ ಕ್ಷಣವನ್ನೇ ಕವಿ ಹೀಗೆ ದಾಖಲು ಮಾಡುವರು. ಸನಿಹಕ್ಕೆ ಬಂದಾಗಲೇ ದೂರಾಗುವ, ದೂರ ಉಳಿದರೆ ಹತ್ತಿರಕ್ಕೆ ಚಡಪಡಿಸುವುದು ಇಲ್ಲಿನ ನಿಯಮವೆ? ಅಥವಾ ಶಾಪವೆ? ಡೈವೋರ್ಸ್ ಕೇಸುಗಳು ಏಕೆ ಹೆಚ್ಚುತ್ತಲೇ ಹೋಗುತ್ತಿದೆ? ಇದರ ತೊಡಕನ್ನು ಕಾಣಿಸುತ್ತಿರುವುದು :

*ಬೆವರೊಡೆದು ಕಂಪಿಸುವ ಬೆರಳು*
*ಕಣ್ಣೆದುರಿಗೇ ದೂರ ನಿಂತಿದ್ದಾಳೆ ಅವಳು*
*ಹಗಲೂ ರಾತ್ರಿ ಬಿಡದೆ ನೋಡಿ*

*ಈ ಆಕಾಶ*

*ಒಂದೂ ಮೋಡಗಳು ಕೂಡುವುದೇ ಇಲ್ಲ*

(ಒಂದು ಮೋಡಗಳು ಕೂಡುವುದೇ ಇಲ್ಲ)

ವಿಭಜನೆಯ ನೆರಳು ಆಧುನಿಕ ಜೀವನದಲ್ಲಿ ದಿನ ಕಳೆದಂತೆಲ್ಲಾ ಉದ್ದವಾಗುತ್ತಲೇ ಹೋಗುತ್ತಿದೆ. ಹೆಚ್ಚು ಸೂಕ್ಷ್ಮವಾದಂತೆಲ್ಲಾ ಮನುಷ್ಯ ಸಂಬಂಧಗಳು ನಾಜೂಕಾಗುತ್ತಿದೆಯೆ? ಇರಬಹುದು :

*ಸಾಸಿವೆಗೆ ಸಿಡಿಯುವುದೆ ಸುಖ*

*ಸಿಡಿಯುವುದೆಂದರೆ ಸಾವು*

*ನೆಲದೊಳಗಿದ್ದು ನೆಲವನರಿಯದ*

*ಮನೆಯೊಳಗಿದ್ದು ಹತ್ತಿರವಿರದ*

*ಒಡೆದ ಕನ್ನಡಿಬಾಳ*

*ಕೂಡಿಸುವ ಗುಟ್ಟ ಹೇಳಿಕೊಡು* (ನಿಯಮ)

ಇದು ಸಾಕಾರಗೊಳ್ಳಬೇಕಾದರೆ ಗಂಡು – ಹೆಣ್ಣು ತಮ್ಮ ಸ್ವಯಾವೃತ್ತವನ್ನು ಕಳೆದುಕೊಂಡೇ ಅಥವಾ ಕೆಳಕ್ಕೆ ಬೀಳಿಸಿಯೇ ಸಾಗಬೇಕಾದ ಅನಿವಾರ್ಯವಿದೆ. ತರ್ಕವಿಲ್ಲದ ಹೃದಯಸಂಬಂಧಿಯಾದ ಹಾದಿ ಮಾತ್ರವೆ ಬಹುಶಃ ಈ ಸಹಚರ್ಯಕೆ ಬೆಳಕ ಹಾಯಿಸಬಲ್ಲುದು :

*ಎರಡು ಒಂದಾಗಿ*

*ಭೂಮಧ್ಯದ ಬಿಂದಾಗಿ*

*ಕೊಳಲಿನುಲಿ ತುಂಬುವುದು ಎದೆಯ*

*ಎಲ್ಲ ಗಂಡಸುತನಕೆ ಸೊನ್ನೆ ಸುತ್ತಿ*

*ಅರಳಿ ನಿಲ್ಲುವುದು ಪುಷ್ಪಹೃದಯ* (ಪುಷ್ಪಹೃದಯ)

ಮತ್ತೊರ್ವ ಕವಿ ಎಚ್.ಆರ್. ರಮೇಶ್ ಅವರ ಕವಿತೆಗಳು ನಗರದ ವೇಗವನ್ನು ಇಲ್ಲಿನ ಬಾಳಾಟವನ್ನು ವಿಡಂಬನೆಯ ಮೊನಚಿನಲ್ಲಿ ಬಿಂಬಿಸುತ್ತವೆ. 'ಎಡವಟ್ಟು ಬದುಕಿನ ಲಯಗಳು' (೨೦೦೫), 'ಸಾಸಿವೆ ಹೂವ ಚರಿತ' (೨೦೦೯) ಇವರ ಪ್ರಕಟಿತ ಕವನ ಸಂಕಲನಗಳು.

*ನ್ಯೂಟನ್ನನ ಕಾಲದಲ್ಲಿ*

*ತಲೆ ಮೇಲೆ ಬೀಳುತ್ತಿದ್ದವು ಸೇಬು*

*ಸೇಬಿಗೂ ಭೂಮಿಗೂ*

*ಕರುಳ ಬಳ್ಳಿಯ ಅನುಬಂಧ*

*ಈ ಕಾಲದಲ್ಲಿ*

*ಸೇಬು ಸೇಬಲ್ಲ ಭೂಮಿ ಭೂಮಿಯಲ್ಲ*

*ಕರುಳಿಗೂ ಪ್ಲಾಸ್ಟಿಕ್ ಸರ್ಜರಿ* (ಪೊಯಟ್ರಿ ಗ್ಯಾರೇಜು)

ಜೀವದ ಜೊತೆಗೆ ಜೀವನ ಮೌಲ್ಯಗಳ ಕುಸಿತವನ್ನು ಸಂವೇದನೆಯ ಎತ್ತರದಲ್ಲಿ ಅಥವಾ ಸ್ಪರ್ಶದಲಿ ಕಾಣಬಯಸುತ್ತಿರುವ ಕವಿಗೆ ಇಲ್ಲಿನ ವಿಷಾದ ಮತ್ತು ಬೆರಗನ್ನು ಒಂದೇ ಬಿಂದುವಿನಲ್ಲಿ ಕೂಡಿಸಿ ನೋಡಲು ಸಾಧ್ಯವಾಗಿದೆ:

*ಜನರಲ್ ವಾರ್ಡಿನ*
*P.W.D ರಸ್ತೆಯಂತಿರುವ ಹಾಸಿಗೆ*
*ಮೇಲೆ*
*ಅಮ್ಮನ ನರತಂತುಗಳು*
*ಇಂಜಕ್ಷನ್ನಿನ ಹನಿಗಳಲಿ*
*ಜೀವಕೆ ಚಡಪಡಿಸುವಾಗ*
*ಚುಕ್ಕಿಗಳು*
*ನಗುತ್ತಿವೆ ನಗುತ್ತಲೇ ಇವೆ* (ಜೀವದ ಸಾವಿನ ಮ್ಯೂಸಿಕಲ್ ಕನ್ಸರ್ಟೂ)

ಕವಿ ತೋರುತ್ತಿರುವ ಇನ್ನೊಂದು ಚಿತ್ರದಲ್ಲಿ ಸಂಕೇತಗಳು ಕೊಲಾಜ್‌ನಲ್ಲಿದ್ದು ಒಂದು ರೂಪಕವಾಗಿ ಬೆಳೆಯುವ ಶಕ್ತಿಯನ್ನು ಪ್ರಕಟಿಸುತ್ತದೆ:

*ಬಿದಿರ ಹೂವಿಗೆ ಬೆದರಿ ಹಳ್ಳಿ ಹಳ್ಳಿಯೇ ಗುಳೆ*
*ಪಾರ್ಲಿಮೆಂಟಿನಲಿ ಮಹಾಕಾವ್ಯ*
*ಸಿನಿಮಾ ಮಾಡಿದರೆ ಸ್ವರ್ಣಕಮಲ!*
*ಅಪ್ಪನ ಮಣ್ಣ ಮಾಡಿದ ಮಣ್ಣಲ್ಲಿ ಮಕ್ಕ ಳ ನಿರಾತಂಕ*
*ಆಟ*
*ಬಸವನ ಹುಳು ಬುಲ್ಡೋಜರ್ ಅಡಿಯಲ್ಲಿ*
*ಮೆಲ್ಲಮೆಲ್ಲನೆ ಸರಿಯುತ್ತಿದೆ* (ಅವ್ಯವಸ್ಥಿತ ಕವನ)

ಇಂತ 'ಸಿನಿಮಾ ಸವಾರಿ'ಗಳ ಅಂಗಳದಲ್ಲಿ ಭರವಸೆಯೊಂದು ಸ್ವಂತ ನೆಲೆಯಲ್ಲಿ ಈ ರೂಪದಲ್ಲಿದೆ:

*ಎಂಜಲ ನೀರಿನಿಂದ ಬೆಳೆದ ಅಂಗಳದ*
*ಹೂವು*
*ದೇವಲೋಕದ ರೂಪಿಸುತಿದೆ (ಪದ್ಯವೊಂದಕ್ಕೆ ಸಿಕ್ಕಿದ ಸಾಲುಗಳು)*

ನಗರ - ಗ್ರಾಮೀಣ, ದೇಶಿ - ಜಾಗತೀಕರಣ, ಇತಿಹಾಸ - ವರ್ತಮಾನ, ಹೀಗೆ ವಿಭಾಗಿಸಿಕೊಂಡು ಈ ಕಾಲವನ್ನು ಅರಿಯುವ ಕ್ರಮ ಇರುವಾಗಲೂ ಈ ಕಣ್ಕಟ್ಟುಗಳ ಆಚೆಗೂ ನಿಜವ ಕಾಣುವ ಹಂಬಲ ತೋರುತ್ತಿರುವ ಕವಿ ಅಂಕುರ್ ಬೆಟಗೇರಿ'ಹಿಡಿದ ಉಸಿರು' (೨೦೦೪), 'ಇವರ ಹೆಸರು' (೨೦೦೬) ಇವರ ಪ್ರಕಟಿತ ಕವನ ಸಂಕಲನಗಳು.

*ನಾನು ಬಿಟ್ಟ ಉಸಿರು ಯಾರು*
*ತೆಗೆದುಕೊಳ್ಳುತ್ತಾರೋ, ನಾನು ಯಾರು ಬಿಟ್ಟ*
*ಉಸಿರು ತೆಗೆದುಕೊಂಡಿದ್ದೀನೋ*
*ಗೊತ್ತಿಲ್ಲ*
*ಉಸಿರಲ್ಲೇ ನಮ್ಮ ಜೀವದ ಬಣ್ಣವನ್ನು*
*ಎಲ್ಲೆಲ್ಲೂ ಚೆಲ್ಲಿಬಿಡುವ ನಾವು*
*ನೆಲದ ಮೇಲೆ ಗೆರೆ ಕೊರೆದುಕೊಂಡು*

*ನಮ್ಮ ಅಸ್ತಿತ್ವವನ್ನು ಅದರಲ್ಲಿ ಮುದುಡಿ ಮಡಚಿಟ್ಟು*
*ನಿದ್ದೆಗೆಟ್ಟು ಕಾವಲು ಕಾಯುವುದೇಕೆ? (ಹರಡು)*

## (೩)

ಕವಿ ತಾನು ಜೀವಿಸುತ್ತಿರುವ ಕಾಲವು ಇಂತ ಪ್ರಶ್ನೆಯೊಂದನ್ನು ಕೇಳುಕೊಳ್ಳುವಂತೆ ಉದ್ದೀಪಿಸಿದೆ. ಭೂಮಿ - ರಾಜ್ಯ - ನೀರು ಎಲ್ಲವನ್ನು ಪಾಲುಮಾಡಿಕೊಳ್ಳುವ ಲೆಕ್ಕಾಚಾರ ಸುತ್ತಮುತ್ತ ಜಾರಿಯಲ್ಲಿದೆ. ಇದರೊಂದಿಗೆ ಜಾತಿ - ಧರ್ಮ - ಪ್ರತಿಷ್ಠೆ - ಗಂಡು - ಹೆಣ್ಣು ಇವುಗಳ ಅಹಂಭಾವದ ಗೆರೆಗಳು ಕೊರಡಾಗಿಸುತ್ತಿದೆ. ಇವು ಕವಿ ಕೇಳುತ್ತಿರುವ ಪ್ರಶ್ನೆಗೆ ಹಿನ್ನೆಲೆ ಒದಗಿಸುತ್ತಿದೆ. ಹಗುರವು ಮತ್ತು ಬೆರೆಯುವ ಗುಣವನ್ನು ಹೊಂದಿಯೂ ತನ್ನ ಕುರುಹನ್ನು ಬಿಟ್ಟುಕೊಡದ ಈ ಉಸಿರನ್ನು ಪ್ರತಿಮೆಯಾಗಿ ಸ್ವೀಕರಿಸಿಯೇ ಎಲ್ಲೆಗಳನ್ನು ಮೀರಬೇಕು ನಾವು. ಹರಡು ಉಸಿರಿನಂತೆ ಇಲ್ಲಿ ಚಲಿಸುತ್ತಿರುವ ಕಾಲವು ಇರುವುದನ್ನು :

*ಬಣ್ಣ ಸುಲಿಯುತ್ತಿರುವ ನನ್ನ ರೂಮಿನ ಗೋಡೆಯೊಳಗೆ*
*ಕುಡಿಯುವ ನೀರಿನ ಪೈಪೊಂದು ಒಡೆದುಹೋಗಿದೆ*
*ಮಧ್ಯರಾತ್ರಿ ೩ರ ನಿಶ್ಯಬ್ದದಿಂದ ಅದು*
*ನನ್ನ ಕಿವಿಯೊಳಕ್ಕೆ ಜುಳು ಜುಳು ಎಂದು*
*ಹರಿಯಲು ಶುರುಮಾಡಿದಾಗ*
*ಒದ್ದೆಯಾದ ಗೋಡೆಯ ಮೇಲೆ ನನ್ನ ಕೈ ಇಡುತ್ತೇನೆ*
*ಗೋಡೆಯೊಳಗೆ ನೀರು ಹರಿಯುತ್ತಿರುವಂತೆ*
*ಕಾಲ ನನ್ನಲ್ಲಿ ಹರಿಯುತ್ತಿರುವುದು*
*ನನಗಾಗ ಕೇಳಿಸುತ್ತದೆ* (ಮಧ್ಯರಾತ್ರಿ ೩)

ಹೀಗೆ ಒಳದನಿಗೆ ನಿಷ್ಠೆಯನ್ನು ತೋರಿರುವುದರಿಂದ ತನ್ನ ಕಾಲದ ಹರಿವನ್ನು ಅನುಭವದಲ್ಲಿ ಕಂಡುಕೊಳ್ಳಲು ಕವಿಗೆ ಸಾಧ್ಯವೂ ಆಗಿದೆ. ಈ ಅನುಭವದ ಆವರಣದಲ್ಲಿ ನಿಂತು ಬರೆಯುತ್ತಿರುವ ಕವಿ ನಾಗಣ್ಣ ಕಿಲಾರಿ. 'ನಿಂತ ಮಳೆ ಹನಿ' (೨೦೦೫) ಇವರ ಪ್ರಕಟಿತ ಕವನ ಸಂಕಲನ.

*ಬೀದಿ ಬೀದಿಯಲಿ ನಿಂತ ದೀಪದ ಕಂಬ*
*ಇನ್ನು ಬೆಳಗುವ ಸಮಯ*
*ಪ್ರೇಮಿಗಳು ಭಿಕ್ಷುಕರು ದರ್ವೇಸಿಗಳು*
*ಮನುಷ್ಯರು ಇಲ್ಲದವರು ಇರುವವರ*
*ಕನಸಿದ ತೊಟ್ಟಿ ತೂಗುವ ಗಾಳಿಗೆ*
*ಜಾತ್ರೆಯಲಿ ಕಳೆದ ಬಾಲಕ*
*ಪ್ರಶ್ನಿಸಿದ್ದಾನೆ ಪೋಲಿಸರನ್ನು*
*ಸಂಜೆಯಾಗುವುದೆಂದಿಗೆ?* (ಸಂಜೆಯಾಗುವುದೆಂದಿಗೆ)

ಇಂಥ ಸಂತೆಯ ನಡುವೆಯೆ ಇರುವ ಅಮಾಯಕ ಚಿತ್ರವನ್ನು ಕೊಡುತ್ತಿರುವ ಕವಿಗೆ ವಾಸ್ತವವೂ ಕಾಣಿಸುತ್ತಿದೆ:

*ಮುಖ ತೊಳೆದು ಕನ್ನಡಿ ಎದುರು ನಿಂತಾಗ*
*ಬಿಚ್ಚಿಕೊಳ್ಳುತ್ತದೆ ರಾತ್ರಿ ಗಂಟು*
*ಪೌಡರ್ ಸ್ನೋ ಕೆನ್ನೆ ರೋಜು ಗಾಜುಗನ್ನಡಿ*
*ಎಲ್ಲೋ ಬಿದ್ದಿರುತ್ತದೆ ಜಡೆಯ*
*ಹೇರ್ ಪಿನ್ ಎಳೆದು ಬಿಸಾಕಿದ ಕೈ*
*ಬಾಚಣಿಗೆ ನಿಧಾನಕೆತ್ತಿ ನೀಳ ಜಡೆ ಬಾಚಿದಂತೆ*
*ಬಾಚಿಕೊಳ್ಳುವ ಬೆಳಗು*
*ಕಪ್ಪು ಕುರಿಗಳೆದ್ದು ಮೈ ನಡ್ಡರಿಸಿ ಕಾಲಾಕಿದಂತೆ ಎತ್ತಲೋ ದಾರಿ*
*ಬಿಚ್ಚಿಕೊಳ್ಳುತ್ತದೆ ಕನ್ನಡಿ ಎದುರು ಬದುಕು* (ಬಿಚ್ಚಿಕೊಳ್ಳುವ ಬದುಕು)

ಬಿಚ್ಚಿಕೊಳ್ಳುವುದು - ಕಟ್ಟಿಕೊಳ್ಳುವುದು ಇಲ್ಲಿನ ನಿರಂತರ ಪಾಡಾದರೂ ಬಾಡಿ ಹೋಗುತ್ತಿರುವ ಜೀವಗಳು ಇಲ್ಲಿದ್ದಾವೆ:

*ರಂಗೋಲಿ ಬಿಡಿಸುತ್ತಿರುವ ಹುಡುಗಿ*
*ರಂಗೋಲಿಯ ರಂಗು*
*ಹಿಡಿಯರ ಪಾದದಡಿ ಕಳೆದು ಹೋಗುತ್ತಿದೆ* (ರಂಗೋಲಿ)

ಇಂತಹ ಬದುಕಿಗಿರುವ ಹಲವು ಮುಖಗಳನ್ನು ಕವಿ ಸಂದೀಪ ನಾಯಕ ಅವರ 'ಅಗಣಿತ ಚಹರೆ' (೨೦೦೫) ಯಲ್ಲಿನ ಕವಿತೆಗಳು ಪರಿಚಯಿಸುತ್ತವೆ.

*ಹಸ್ತದಷ್ಟು ಅಗಲ ಎಲೆ*
*ಗಾಳಿಗೆ ಹಾರಿ ಪುಸ್ತದ ಬದಿಗೆ*
*ಬಂದು ಕೂತಿದೆ*
*ಕೈಯಲ್ಲಿ ಎತ್ತಿಕೊ ಎನ್ನುವಂತೆ*
*ಗಾಳಿಗೆ ಮೆಲ್ಲಗೆ ಹರಿದಾಡುವ*
*ಆ ಪುರಾತನ ವೃಕ್ಷ ಪ್ರತಿನಿಧಿಯ*
*ಹೆಸರನ್ನು ಕಾರಣವೇ ಇರದ ಅವಸರದಲ್ಲಿ*
*ಸುಮ್ಮ ಮರೆತಿದ್ದೇವೆ (ಎಲೆಯ ವಿಳಾಸ)*

ಆದ ಅನುಭವದಿಂದ ತಪ್ಪಿಸಿಕೊಂಡು ಬೇರೇನನ್ನೋ ಆಗಿಸಿಕೊಳ್ಳಲು ಒದ್ದಾಡುವ ಹುಲುಮಾನವರಿಗೆ ಎಲೆ ಅಲ್ಲಾಡುವುದು, ತರಗೆಲೆಯಾಗುವುದು, ಗಾಳಿಗೆ ಗಿರ್ರನೆ ತಿರುಗುವುದು ಹಾಗೆ ತಿರುಗಿದ್ದು ಯಾರದೋ ಜಡೆಯಲ್ಲೋ ಅಥವಾ ತಾರಸಿಯ ಮೇಲೆ ಸೇರಿಕೊಳ್ಳುವ ಬೆರಗನ್ನು ಕಾಣುವುದು, ಅನುಭವಿಸುವುದು ವರ್ಜ್ಯ. ಇರುವುದಷ್ಟನ್ನೆ ಕಾಣುತ್ತಾ ಎದೆತುಂಬಿಕೊಳ್ಳುವ ಕವಿಗೆ ಎಲೆಯೊಂದಿಗೂ ಮಧುರ ಸಂಪರ್ಕ ಏರ್ಪಡುತ್ತದೆ. ಕಣ್ಣಲ್ಲಿ ಯಾವುದೇ ಚಿತ್ರಗಳನ್ನು ತುಂಬಿಕೊಂಡು ಜೀವಿಸುವ ಕವಿಗೆ ಆಗತಾನೆ ಸುರಿವ ಮಳೆಯೂ ಹೊಸತಾಗುವುದು ಹೀಗೆ:

*ತೇವದ ಗಾಳಿ ಮರದ ಎಲೆಗಳನ್ನು*
*ಹಸ್ತದಿಂದ ಆಡಿಸುವುದು*
*ಅದ ನೋಡುತ್ತ ನಾವು*
*ಆರಿದ ಚಹ ಕುಡಿಯುತ್ತಿದ್ದೆವು* (ಇಲ್ಲದೆಯೂ)

ಯಾವುದು ಸಣ್ಣ ಸಂಗತಿಯಲ್ಲ ಎಂದು ಸಾಬೀತು ಮಾಡುತ್ತಿದ್ದರೂ ಬದುಕು ಇಷ್ಟು ಸಲೀಸೆ?

*ಇಸ್ಪೀಟು ಎಲೆಗಳ ಮನೆಯನ್ನು*
*ಉರುಳಿಸಲು ಸಣ್ಣ*
*ಉಸಿರು ಸಾಕು*
*ಮಾತಿನ ಮನೆಯ ಕೆಡಿಸಲು*
*ಒಂದು ಮಾತು*
*ಎಲ್ಲ ಆದ ಮೇಲೆ ಅನ್ನಿಸುತ್ತದೆ*
*ತಪ್ಪಿಸಬಹುದಿತ್ತೆಂದು*
*ಈ ಮುಖಾಮುಖಿಯಲ್ಲಿನ*
*ಮುಜುಗರವನ್ನು* (ಕುರುಹುಗಳು)

ತುಟಿ ಮೀರಿ ಹೊರ ಬಂದ ಮಾತಿಗೆ ಇರುವ ವಿಚಿತ್ರ ಶಕ್ತಿಯನ್ನು ಅದು ನಿರ್ಮಿಸುವ ಸೂತಕದ ವಾತಾವರಣವನ್ನು ಧ್ವನಿಪೂರ್ಣವಾಗಿ ಹೇಳುತ್ತಿರುವಕವಿ ಇಲ್ಲಿ ಕಂಡುಕೊಂಡ ಸತ್ಯವಿದು:

*ಈ ಚಣದವರೆಗೆ*
*ಯಾವ ಸೈನಿಕನೂ ನೆತ್ತರಿಂದ ತೋಯಿಸದೇ*
*ಕತ್ತಿಯನು ಇಟ್ಟಿಲ್ಲ ಒರೆಗೆ*
*ಕಾಯದ ಪೂರ ಗಾಯಗಳಿರುವ*
*ಸಂತರು ಮಾತ್ರ ಈ ತನಕ*
*ಕೊಟ್ಟರು ಬೆಳಕ* (ಮಾಯದ ಗಾಯಗಳ ಗುರುತ ಅರಸಿ)

ಇಂತ ಬೆಳಕೆ ಅಲ್ಲವೆ ಮನುಕುಲವನ್ನು ಕಾಪಿಟ್ಟಿದ್ದು ಅದೇ ಅಲ್ಲವೆ ಹೀಗೆ ಕವಿತೆಯ ರೂಪದಲ್ಲಿ ನಮ್ಮವರೆಗೂ ತಲುಪಿರುವುದು.

**೩. ಸ್ತ್ರೀಸಂವೇದನೆಯ ಆಯಾಮವಾಗಿ ಕಾವ್ಯ**

ಹೊಸ ಶತಮಾನದ ಈ ಆರಂಭದಲ್ಲಿ ಸ್ತ್ರೀ ಸಂವೇದನೆಯು ಮುಖ್ಯವಾಗಿ ಎರಡು ಧಾರೆಗಳಲ್ಲಿ ವ್ಯಕ್ತವಾಗುತ್ತದೆ.

೧. ತನ್ನ ಸ್ವಾತಂತ್ರ್ಯವನ್ನು ತಡೆಗಟ್ಟುತ್ತಿರುವ ಎಲ್ಲಾ ಶಕ್ತಿಗಳ ಕುರಿತು ಪ್ರತಿಕ್ರಿಯೆ - ಪ್ರತಿಭಟನೆ ರೂಪದಲ್ಲಿ ವ್ಯಕ್ತವಾಗಿತ್ತಿರುವುದು.

೨. ಸ್ವಂತಲೋಕದೊಳಗೆ ತನ್ನ ಸ್ವಾತಂತ್ರ್ಯವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ವ್ಯಕ್ತವಾಗುತ್ತಿರುವುದು.

ಈ ಎರಡು ಪ್ರಕ್ರಿಯೆಗಳು ಜಾಗೃತಿಗೊಂಡ ಸ್ತ್ರೀಯರ ಮನೋವಿಕಾಸದ ಪ್ರತೀಕವೇ ಆಗಿದೆ. ಇದು ಕಾವ್ಯದಲ್ಲಿ ಹೇಗೆ ಕಾಣಿಸಿಕೊಳ್ಳುತ್ತಲಿದೆ ಎನ್ನುವುದನ್ನು ಅವಶ್ಯ ಗಮನಿಸಬೇಕು. ಕವಯತ್ರಿ ಕೆ.ಅಕ್ಷತಾ ಅವರ 'ರೆಕ್ಕೆಬಿಚ್ಚಿ ಆಕಾಶನೆಚ್ಚಿ' (೨೦೦೮) ಸಂಕಲನದ ಕವಿತೆಗಳು ಸದ್ಯದ ಸ್ತ್ರೀಕಾವ್ಯ ಮತ್ತಷ್ಟು ಗಮ್ಯಕ್ಕೆ ಹೋಗುತ್ತಿರುವುದನ್ನೆ ಸೂಚಿಸುತ್ತಿದೆ.

*ಅಮ್ಮ ಆಸ್ಥೆಯಿಂದ ಮಾಡಿದ*
*ಉಪ್ಪಿಟ್ಟು ಕೇಸರಿಬಾತು*
*ತಿಂದು ಎಲ್ಲ ತೊಲಗಿದರು*

*ಮತ್ತೊಂದು ವಧು ಪರೀಕ್ಷೆಗೆ*
*ತಯಾರಾಗಿ ನಿಲ್ಲುವಂತೆ*
*ಅಪ್ಪ ಸೂಚನೆ ನೀಡಿದ್ದಾರೆ*
*ಪಾಲಿಸುತ್ತಿದ್ದೇನೆ* (ಸೂಚನೆಯ ಪಾಲನೆ)

ಇಲ್ಲಿ ಅಪ್ಪ ಅಮ್ಮಂದಿರು ಅವರ ತಂದೆ ತಾಯಿಯ ಸೂಚನೆಯನ್ನು ಪಾಲಿಸಿಕೊಂಡು ಬೆಳೆದು ಬಂದವರಾದ್ದರಿಂದ ಈಗ ಮಗಳಿಗೂ ಅದೇ ಸೂಚನೆ ಪಾಲಿಸುವಂತೆ ನೋಡಿಕೊಳ್ಳುತ್ತಿರುವರು. ಆದರೆ ಈ ಹೊಸ ಕಾಲದ ಹುಡುಗಿ ಆಕೆಯ ದನಿಯನ್ನು ಅಡಗಿಸಿಡುವುದು ಅಷ್ಟು ಸುಲಭವೇನಲ್ಲ. ಆಕೆ ತನ್ನ ಅತ್ತೆಯಲ್ಲಿ ಸಲ್ಲಿಸುವ ಮನವಿಯನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ:

*ನಿನ್ನಂತೆಯೇ ಎಲ್ಲ ಬಿಟ್ಟುಕೊಡಲಾರೆ*
*ಒಳಗೊಳಗೆ ಜಿದ್ದುಗಟ್ಟಲಾರೆ*
*ರಾತ್ರಿ ನಕ್ಷತ್ರ ಎಣಿಸುತ್ತಾ*
*ಕಾದಂಬರಿ ಓದುತ್ತಾ*
*ಕವನ ಕಟ್ಟುವಷ್ಟು*
*ಚೇತನ ಉಳಿಸಿಕೊಳ್ಳಲು*
*ಈ ಮನೆಯೊಳಗಿದ್ದೆ ಸಾಧಿಸಲು*
*ಅತ್ತೆ ನನಗೆ ಅನುವು ಮಾಡಿಕೊಡು* (ಅತ್ತೆಯಲ್ಲಿ ಮನವಿ)

ಇರುವ ಅವಕಾಶದೊಳಗೆ ಆದಷ್ಟೂ ಸ್ವಾತಂತ್ರ್ಯಗೊಳ್ಳಬೇಕೆಂಬ ಈ ಅಪೇಕ್ಷೆ ಕಟ್ಟುಬಿಚ್ಚಿಕೊಂಡು ಮುನ್ನಡೆಯುವುದಕ್ಕೆ ಎಂಬುದು ಇಲ್ಲಿ ಮುಖ್ಯ.

*ಮನಸು ಬಿಚ್ಚಿದೆ ದೇಹ ಬಿಚ್ಚಿದೆ*
*ಅಂಜಿಕೆ ನಾಚಿಕೆ ಗಾಂಭೀರ್ಯಗಳನ್ನೆಲ್ಲ*
*ಒಮ್ಮೆಗೇ ಬಿಚ್ಚಿಟ್ಟೆ*
*ತ್ಯಾಗಿಯಂತೆ ಭೋಗಿಯಂತೆ ಲೋಭಿಯಂತೆ*
*ಕುಡುವಿಯಂತೆ ಎಲ್ಲವ ಹೀರಿದೆ*
*ಹಕ್ಕಿಯಾಗಿ ಕೀಟವಾಗಿ ಮರವಾಗಿ*
*ಬದುಕ ಸ್ಪರ್ಶಿಸುವುದ ಅರಿತೆ* (ಕಟ್ಟು - ಬಿಚ್ಚು)

ಹೀಗೆ ತಾನು ಅರಿತ ಮೇಲೆ ಇತರ ಹೆಣ್ಣುಗಳು ಸ್ವಾತಂತ್ರ್ಯಗೊಳಿಸಲು ಕವಯತ್ರಿಯ ಕಿವಿಮಾತು:

*ಮಗಳೆ ಸ್ಕೂಟಿ ಹಿಡಿದು ಹೊರಡು*
*ನಡೆವ ದಾರಿಯಲ್ಲಿ ತಿರುತಿರುಗಿ ಅತ್ತಿತ್ತ*
*ಕಣ್ಣಾಡಿಸುವುದ ಬಿಟ್ಟುಬಿಡು*
*ನಿನ್ನ ಜೊತೆ ಜೊತೆಗೆ ಕಾಲು ಹಾಕುತ್ತಿರುವ*
*ದನ ಕುರಿ ಕತ್ತೆಗಳ ನಡಿಗೆಯಲ್ಲಿನ*
*ಸಹಜತೆ ಸರಾಗತೆಗಳನ್ನು ವೀಕ್ಷಿಸು* (ದಿನಚರಿಯಲ್ಲಿ ಸ್ವಲ್ಪ ಮಾರ್ಪಾಡು)

ಮತ್ತೋರ್ವ ಕವಯತ್ರಿ ಹೇಮಾ ವೆಂಕಟ್ ಹೆಣ್ಣಿನ ತುಮುಲಗಳನ್ನು ಬದುಕಿನ ಲಯದಲ್ಲಿ ಕಟ್ಟಿಕೊಡುತ್ತಿರುವರು. 'ಹುಡುಕುವ ಆಟ' (೨೦೦೮) ಇವರ ಪ್ರಕಟಿತ ಕವನ ಸಂಕಲನ.

*ಅಕ್ಕಸಾಲಿಯ ಕೈಯಲ್ಲಿ*
*ಅಸ್ತ್ರವಾಗುವ ಅದಿರು*
*ಸೃಷ್ಟಿಯಾದದ್ದು ಮಣ್ಣಿನ ಕಣವಾಗಿ* (ಬಯಕೆ)

ಹೆಣ್ಣು ಮತ್ತು ಆಕೆಯ ಬಯಕೆಗೆ ಅವಿನಾಭಾವ ಸಂಬಂಧವಿರುವುದನ್ನು ಕನ್ನಡ ಕಾವ್ಯ ನಿರೂಪಿಸುತ್ತಾ ಬಂದಿದೆಯಾದರೂ ಇಂಥ ಬಯಕೆಯ ನಮೂನೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಲೇ ಬಂದಿವೆ. ಆದರೆ ಬಯಕೆ ಎಂಬುದು ಉಳಿದಿದೆ ಇಂಥ ಬಯಕೆ ಕಣವಾಗಿ ಶುರುವಾಗಿ ಇಡಿಯಾಗಿ ಮನುಷ್ಯನನ್ನೆ ಆಕ್ರಮಿಸಿಕೊಳ್ಳುವಂತದ್ದು. ಆ ಒಂದು ಬಯಕೆ ಮೂರ್ತರೂಪ ಹೀಗಿದೆ:

*ತರಕಾರಿ ಅಂಗಡಿಗೆ ಹೋಗಿ*
*ಚೆನ್ನಾಗಿರುವುದನ್ನೇ ಹೆಕ್ಕಿ*
*ತರಹೇವಾರಿ ತರಕಾರಿ*
*ಚೀಲ ತುಂಬಿ ಚೌಕಾಸಿ ಮಾಡಿ*
*ಹುಳಿ ಪಲ್ಯ ಗೊಜ್ಜು ಸಾರು*
*ನಾನಾ ಬಗೆ ನಾಲಿಗೆ ರುಚಿ*
*ಆಗೆಲ್ಲಾ ನೆನೆಯುತ್ತೇನೆ,*
*ಬದುಕಿನಲ್ಲೂ ಹೀಗೆ*
*ಬೇಕಾದಲ್ಲವನ್ನೂ*
*ಆಯ್ದು ಪಡೆಯುವಂತಿದ್ದರೆ*
*ಎಷ್ಟು ಚೆನ್ನಾ.....*(ಎಷ್ಟು ಚೆನ್ನಾ)

ಇಂದು ಅಂದುಕೊಂಡಷ್ಟು ಸುಲಭವಲ್ಲ ಎನ್ನುವುದನ್ನೆ ಈ ನೆಲದ ಮದುವೆಗಳು ಜಗದ ಅಪ್ಪ ಅಮ್ಮಂದಿರು ಸಾರುತ್ತಾ ಬಂದಿದ್ದಾರೆ. ಆದ್ದರಿಂದ ಇಲ್ಲಿನ ಪ್ರತಿ ಹೆಣ್ಣಿಗೂ ಅನ್ನಿಸುವುದು:

*ನಾವು ಪೂರ್ತಿ ಬದಲಾಗುತ್ತೇವೆ*
*ಮೂರುಗಂಟಿನ ನಂಟಿಗೆ*
*ಜನ್ಮಜಾತಕದ ಹೆಸರನ್ನೂ*
*ಮೆಚ್ಚಿನ ಬದುಕು*
*ನೆಚ್ಚಿನ ತಿನಿಸು*
*ಎಲ್ಲವನ್ನೂ ಬಿಟ್ಟು*
*ಬೇರೆಯೇ ವ್ಯಕ್ತಿಗಳಾಗುತ್ತೇವೆ* (ಎಲ್ಲ ಬಿಟ್ಟು)

ಒಂದು ದಡದಿಂದ ಇನ್ನೊಂದು ದಡಕ್ಕೆ ದಾಟುವ ಮದುವೆಯ ಪರಿಣಾಮವಿದು. ಇಲ್ಲಿಂದ ಶುರುವಾಗುವುದೆ ಮುಖವಾಡ ಧರಿಸಿಕೊಂಡು ಜೀವಿಸುವ ಆಟ? ಕವಿತೆಯೊಂದು ಹೌದು ಎಂದು ತಲೆಯಲ್ಲಾಡಿಸುತ್ತಿದೆ ಹೀಗೆ:

*ಯಾರ ಕಣ್ಣಿನಲ್ಲಿ*
*ನಾನು ಹೇಗೆ*
*ಚಿತ್ರವಾಗಿದ್ದೆನೋ*
*ಅದು ಹಾಗೆ ಇರಲಿ ಬಿಡು*
*ಅದರ ಮೇಲೆ*
*ಮತ್ತೊಂದು ಚಿತ್ರ ಮೂಡಿ*
*ಅಸ್ಪಷ್ಟವಾಗುವುದು ಬೇಡ*
*ಎನ್ನುತ್ತದೆ, ಮನಸು* (ಮುಖವಾಡ)

ಸದಾ ಇನ್ನೊಬ್ಬರ ಕಣ್ಣಿನಿಂದ ತನ್ನನ್ನು ನೋಡಿಕೊಳ್ಳುವುದು ಇಲ್ಲಿ ಎಲ್ಲರ ಕರ್ತವ್ಯವೇ ಆಗಿಬಿಟ್ಟಿದೆ. ಇದು ಮುಖವಾಡವನ್ನೇ ಮುಖವೆಂದುಕೊಂಡಂತೆ ಆದರೂ ಮುಖವಾಡವೇ ಇರಲಿ ಅನ್ನಿಸಬೇಕಾದರೆ ಅದು ಈ ಸಮಾಜದ ಸಂದಿಗ್ಧತೆಯೇ. ಹೀಗೆ ಹೆಣ್ಣಿನ ಸಂಕಟ ಮಾತ್ರವೇ ಆಗದೆ ಒಟ್ಟು ಮನುಷ್ಯನ ಬಗೆಯೆ ಮಾತನಾಡುತ್ತಿದ್ದಾರೆ ಎಂಬಾ ಭಾವ ಹುಟ್ಟುವ ಇಲ್ಲಿನ ಕವಿತೆಗೂ ಹೀಗೂ ಅನ್ನಿಸಿಬಿಡುತ್ತದೆ:

*ಎಲ್ಲ ನೋವುಗಳೂ ಒಂದೇ*
*ಬಗೆದಿರುವ ಬಗೆ ಮಾತ್ರ*
*ಬೇರೆಯಷ್ಟೇ* (ಪುನರ್ಜನ್ಮ)

ಬಹುರೂಪದಲ್ಲಿ ವ್ಯಕ್ತವಾಗುತ್ತಿರುವ ಈ ದಶಕದ ಕನ್ನಡ ಕಾವ್ಯವು ಕವಿ ಡಿ.ವಿ. ಪ್ರಹ್ಲಾದ್ ದವರು ಅಭಿಪ್ರಾಯಪಡುವಂತೆ

*'ಹೊಸಬರ ಕಾವ್ಯ ತನ್ನ ಸುತ್ತಲ ಬದುಕಿನ ಎಲ್ಲವನ್ನೂ*
*ಒಳಗೊಂಡಿದೆ. ಚಳುವಳಿಯಿಂದ ರೂಪುಗೊಂಡ*
*ತಾತ್ವಿಕ ಎಚ್ಚರ ಒಂದು ಕಡೆಯಾದರೆ, ಅವುಗಳ*
*ಮಿತಿಗಳ ಬಗೆಗಿನ ತಿಳುವಳಿಕೆ ಮೌನವಾಗಿ*
*ತನ್ನ ಕೆಲಸ ಮಾಡತೊಡಗಿದೆ' ಎಂಬುದು ನಿಜವೆನಿಸುತ್ತದೆ.*
(ಸಂಚಯ, ೭೫, ಸಂಪಾದಕೀಯ)

ಇದರ ಇನ್ನೊಂದು ಮುಖವನ್ನು ಚಿಂತಕರಾದ ಡಾ. ರಹಮತ್ ತರೀಕೆರೆ ಅವರು ಪರಿಶೀಲಿಸಿರುವಂತೆ

*'ತಲ್ಲಣ, ಅಸ್ಪಷ್ಟತೆ, ಹುಡುಕಾಟ, ಉತ್ಸಾಹ ಉಮೇದುಗಳೆಲ್ಲವೂ*
*ಸೇರಿದಂತಹ ಒಂದು ಸಂಕೀರ್ಣ ಸನ್ನಿವೇಶದಲ್ಲಿ*
*ಬರೆಯುತ್ತಿರುವ ಹೊಸತಲೆಮಾರಿನ ಲೇಖಕರ ಬರೆಹದ ಮೂಲಕ,*
*ಕನ್ನಡ ಸಾಹಿತ್ಯವೂ ೨೧ನೇ ಶತಮಾನದ ಈ ಮೊದಲ*
*ಪಾದದಲ್ಲಿ, ಹೊಸ ಹೊರಳಿಕೆಯನ್ನು ಪಡೆಯಲು ಯತ್ನಿಸುತ್ತಿದೆ'*
(ಹೊಸ ತಲೆಮಾರಿನ ತಲ್ಲಣ, ೧೮೬)

ಇಪ್ಪತ್ತೊಂದನೆ ಶತಮಾನದ ಕನ್ನಡ ಕಾವ್ಯದಲ್ಲಿ ಸಮುದಾಯಗಳು ತಮ್ಮ ನೆನಪನ್ನು ವಿವರಗಳಲ್ಲಿ ದಾಖಲಿಸಲು ಮಾತ್ರವೆ ಆಸಕ್ತವಾಗಿರುವುದು, ಹಳೆಯ ವಸ್ತು ವಿಷಯಗಳೇ ಕಾವ್ಯದಲ್ಲಿ ಪರಿಭ್ರಮಣವಾಗುತ್ತಾ ಅನುಭವಲೋಕ ವಿಸ್ತರಿಸಿಕೊಳ್ಳದೆ

ಉಳಿದಿರುವುದು, ನಿಖರವಾಗಿ ರಾಜಕೀಯ ನಿಲುವನ್ನು ಪ್ರಕಟಿಸುವುದಷ್ಟೇ ಮುಂಚೂಣಿಗೆ ಬರುತ್ತಿವೆ. ಈ ಕಾಲಕ್ಕೆ ಮತ್ತು ಸಮಾಜಕ್ಕೆ ಕಾವ್ಯದ ಸಂದರ್ಭದಲ್ಲಿ ಇವೆಲ್ಲವನ್ನು ಒಳಗೊಳ್ಳುವುದು ಅನಿವಾರ್ಯವೂ ಆಗಿದೆ. ಆದರೆ ಇದಷ್ಟೆ ಕಾವ್ಯವಾಗಲಾರರು ಎಂಬ ಎಚ್ಚರ ಈ ತಲೆಮಾರಿನ ಕವಿಗಳಿಗಿದೆ ಹಾಗಾಗಿಯೇ ಅವರು ಅಲ್ಲಲ್ಲಿ ಮೀರುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ.